ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ


21 ಡಿಸೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 279 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಬ್ಯಾಟಿಂಗ್ ಲಯ ಕಂಡು ಕೊಳ್ಳದ ಕಾರಣ ಫೆಬ್ರವರಿಯಲ್ಲಿ ಆರಂಭವಾಗಲಿರುವ ಟಿ-20 ವಿಶ್ವಕಪ್ ಟೂರ್ನಿಯಿಂದ ಶುಭಮನ್ ಗಿಲ್‌ಗೆ ತಂಡದಿಂದ ಕೊಕ್ ನೀಡಲಾಗಿದೆ...

ಹದ್ದಿನ ಕಣ್ಣು, ಸಿಂಹದ ಗುಂಡಿಗೆ ಹಾಗು ನಾರಿಯ ಕೋಮಲ ನರಗಳು » 2



ಚಿಂತನೆಯನ್ನು ಟ್ರಿಮ್ ಮಾಡುವ ರೇಜರ್‌ಗಳು » 3



ಆಳುವ ಸರ್ಕಾರಗಳಿಂದಲೇ ಶಾಂತಿಗೆ ಬೆಂಕಿ » 4


## ಶೀತ ಗಾಳಿ: ಹಾಸನದಲ್ಲಿ ಯೆಲ್ಲೋ ಅಲರ್ಟ್

**ಬೆಂಗಳೂರು:** ಹಾಸನ ಸೇರಿ ರಾಜ್ಯದ ಹಲವು ಜಿಲ್ಲೆಗಳಲ್ಲಿ 2 ದಿನಗಳ ಕಾಲ ತೀವ್ರ ಶೀತ ಗಾಳಿ ಇರಲಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ(ಕೆಎಸ್‌ಎನ್‌ಡಿಎಂಸಿ) ಮುನ್ನೆಚ್ಚರಿಕೆ ನೀಡಿದೆ.

ರಾಜ್ಯದ ಉತ್ತರ ಒಳನಾಡಿನ ಬೀದರ್, ಬೆಳಗಾವಿ, ಬಾಗಲಕೋಟೆ, ಕಲಬುರಗಿ, ರಾಯಚೂರು, ವಿಜಯಪುರ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಶೀತ ಗಾಳಿಯ ಹೆಚ್ಚಿನ ಪ್ರಮಾಣದಲ್ಲಿರಲಿದೆ ಎಂದು ಮಾಹಿತಿ ನೀಡಿದೆ. ಹಾಸನ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮೈಸೂರು, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಿದೆ. ಉತ್ತರ ಕರ್ನಾಟಕ ಹಲವು ಜಿಲ್ಲೆಗಳಲ್ಲಿ ಡಿ.20 ಹಾಗೂ ಡಿ.21ರಂದು ತೀವ್ರ ಶೀತ ಗಾಳಿ ಇರಲಿದ್ದು, ಮುನ್ನೆ ಚ್ಚರಿಕಾ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ರಾಜ್ಯದ ಹಲವು ಜಿಲ್ಲೆ ಗಳಲ್ಲಿ ಡಿ.21 ರಿಂದ ಡಿ.25ರವರೆಗೆ ಶೀತಗಾಳಿ ಮುಂದುವರಿಯಲಿದೆಂದು ಹೇಳಿದೆ.

# ಬುಲ್ಡೋಜ್‌ನಲ್ಲಿ ನರೇಗಾ ನೆಲಸಮ

## ಹೊಸ ಕರಾಳ ಕಾನೂನು ವಿರುದ್ಧ ಹೋರಾಟಕ್ಕೆ ಕಾಂಗ್ರೆಸ್ ಕಾರ್ಯಕರ್ತರಿಗೆ ಸೋನಿಯಾ ಗಾಂಧಿ ಕರೆ

• ಪ್ರಜೋದಯ ವರದಿ

**ನವದೆಹಲಿ:** ನರೇಂದ್ರ ಮೋದಿ ಸರ್ಕಾರವು ನರೇಗಾ ಯೋಜನೆಯನ್ನುಬುಲ್ಡೋಜ್ ಮಾಡಿದೆ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಆರೋಪಿಸಿದ್ದಾರೆ.

ನರೇಗಾಕ್ಕೆ ಪರ್ಯಾಯವಾಗಿ ರೂಪಿಸಿರುವ 'ಜಿ ರಾಮ್ ಜಿ' ಕಾಯ್ದೆಯನ್ನು 'ಕರಾಳ ಕಾನೂನು' ಎಂದಿರುವ ಅವರು, ಅದನ್ನು ಹಿಂಪಡೆಯಲು ದೇಶದಾದ್ಯಂತ ಕಾಂಗ್ರೆಸ್ ಕಾರ್ಯ ಕರ್ತರು ಪ್ರತಿಭಟನೆ ನಡೆಸಲಿದ್ದಾರೆಂದು ವಿಡಿಯೋ ಸಂದೇಶವೊಂದನ್ನು ಸಾಮಾಜಿಕ ಜಾಲ ತಾಣದಲ್ಲಿ ಹಂಚಿಕೊಂಡಿರುವ ಅವರು, ನರೇಗಾವನ್ನು ದುರ್ಬಲಗೊಳಿಸುವ ಮೂಲಕ, ಸರ್ಕಾರ ದೇಶದ ಕೋಟ್ಯಾಂತರ ರೈತರ, ಕಾರ್ಮಿಕರ ಹಾಗೂ ಭೂರಹಿತರ ಹಿತಾಸಕ್ತಿ ಮೇಲೆ ದಾಳಿ ನಡೆಸಿದೆ ಎಂದು ಟೀಕಿಸಿದ್ದಾರೆ.

ಕಳೆದ 11 ವರ್ಷದಿಂದ ಕೇಂದ್ರ ಸರ್ಕಾರವು ಗ್ರಾಮೀಣ ಬಡವರ ಹಿತಾಸಕ್ತಿಯನ್ನು ಕಡೆಗಣಿಸಿದೆ. 20 ವರ್ಷದ ಹಿಂದೆ ಸಂಸತ್ತಿನಲ್ಲಿ ನರೇಗಾ ಮಸೂದೆಗೆ ಸಂಸತ್ತು ಒಮ್ಮತದ ಒಪ್ಪಿಗೆ ಕೊಟ್ಟ ದಿನ ನನಗೆ ಚೆನ್ನಾಗಿ ನೆನಪಿದೆ. ಅದೊಂದು ಕ್ರಾಂತಿಕಾರಕ ಹೆಜ್ಜೆ. ವಂಚಿತರು, ಶೋಷಿತರು ಮತ್ತು ಅತ್ಯಂತ ಬಡವರಿಗೆ ಅದು ಜೀವನೋಪಾಯದ ಸಾಧನವಾಯಿತು ಎಂದು ಹೇಳಿದ್ದಾರೆ.



"ನರೇಗಾ ಜಾರಿಗೆ ತರುವಲ್ಲಿ ಕಾಂಗ್ರೆಸ್ ಪ್ರಮುಖ ಪಾತ್ರ ವಹಿಸಿದೆ. ಆದರೆ, ಈ ಕಾನೂನನ್ನು ದುರ್ಬಲಗೊಳಿಸುವ ಮೂಲಕ ಮೋದಿ ಸರ್ಕಾರವು ಲಕ್ಷಾಂತರ ರೈತರು, ಕಾರ್ಮಿಕರು ಮತ್ತು ಭೂಹೀನ ಗ್ರಾಮೀಣ ಬಡವರ ಹಿತಾಸಕ್ತಿಗಳ ಮೇಲೆ ದಾಳಿ ಮಾಡಿದೆ. ಈ ದಾಳಿಯನ್ನು ಎದುರಿಸಲು ನಾವೆಲ್ಲರೂ ಸಿದ್ಧರಿದ್ದೇವೆ.

-ಸೋನಿಯಾ ಗಾಂಧಿ, ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ

ನರೇಗಾದಿಂದ ಕೆಲಸ ಹುಡುಕಿಕೊಂಡು ವಲಸೆ ಹೋಗುವವರ ಸಂಖ್ಯೆ ಕಡಿಮೆಯಾಯಿತು, ಉದ್ಯೋಗದ ಕಾನೂನು ಹಕ್ಕನ್ನು ನೀಡಲಾಯಿತು, ಗ್ರಾಮ ಪಂಚಾಯಿತಿಗಳು ಬಲವರ್ಧನೆಗೊಂಡವು. ನರೇಗಾದ ಮೂಲಕ ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯದ ಆಧಾರಿತ ಭಾರತದ ಕನಸನ್ನು ನನಸು ಮಾಡುವ ದೃಢ ಹೆಜ್ಜೆ ಇಡಲಾಯಿತು. ಆದರೆ, ಈಚೆಗೆ ನರೇಗಾದ ಮೇಲೆ ಸರ್ಕಾರ ಬುಲ್ಡೋಜರ್ ಹರಿಸಿತು.

ಮಹಾತ್ಮ ಗಾಂಧಿಯವರ ಹೆಸರನ್ನು ತೆಗೆದು ಹಾಕಿತಲ್ಲದೆ, ಯ ಾ ವ ್ ರ ದ ೇ ಪರ್ಯಾಲೋಚನೆ ಮಾಡದೆ, ಯಾರ ಅಭಿಪ್ರಾಯವನ್ನು ಪಡೆಯದೆ, ವಿರೋಧ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನರೇಗಾದ ರಚನೆಯನ್ನೇ ಬದಲಿಸಲಾಯಿತು ಎಂದು ಆರೋಪಿಸಿದ್ದಾರೆ.

ಹೊಸ ಕಾನೂನಿನಲ್ಲಿ ಯಾರು, ಎಷ್ಟು, ಎಲ್ಲಿ, ಯಾವ ವಿಧದ ಉದ್ಯೋಗ ಪಡೆಯುತ್ತಾರೆ ಎನ್ನುವುದನ್ನು ದೆಹಲಿಯಲ್ಲಿರುವ ಸರ್ಕಾರ ನಿರ್ಧಾರ ಮಾಡುತ್ತದೆ. ಇದು ವಾಸ್ತವಕ್ಕೆ ವಿರುದ್ಧವಾದುದು. ನರೇಗಾ ರಾಷ್ಟ್ರೀಯ ಹಾಗೂ ಜನರ ಹಿತಾಸಕ್ತಿಯೊಂದಿಗೆ ಸಂಬಂಧವಿದ್ದ ಯೋಜನೆ. ಅದನ್ನು ದುರ್ಬಲಗೊಳಿಸುವ ಮೂಲಕ ಮೋದಿ ಸರ್ಕಾರವು, ಕೋಟ್ಯಾಂತರ ರೈತರ, ಕಾರ್ಮಿಕರ ಹಾಗೂ ಭೂ ರಹಿತ ಬಡವರ ಹಿತಾಸಕ್ತಿಗಳ ಮೇಲೆ ದಾಳಿ ನಡೆಸಿದೆಂದು ತಿಳಿಸಿದ್ದಾರೆ.

ಕಳೆದ ಒಂದು ದಶಕದಿಂದ, ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರವು ಈ ಯೋಜನೆಯನ್ನು ದುರ್ಬಲಗೊಳಿಸಲು ಹಲವು ಪ್ರಯತ್ನಗಳನ್ನು ಮಾಡಿದೆ. ಕಳೆದ 11 ವರ್ಷಗಳಲ್ಲಿ ಮೋದಿ ಸರ್ಕಾರವು ನಿರುದ್ಯೋಗಿಗಳು, ಬಡವರು ಮತ್ತು ಗ್ರಾಮೀಣ ಪ್ರದೇಶದ ವಂಚಿತರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿದೆ. ನರೇಗಾ ದುರ್ಬಲಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಿದೆ. ಆದರೂ ಕೋವಿಡ್ ಸಮಯದಲ್ಲಿ ಅದು ಬಡವರಿಗೆ ಜೀವನಾಡಿಯಾಗಿತ್ತು ಎಂದು ಹೇಳಿದ್ದಾರೆ.

### ಕಾನೂನು ಹಿಂಪಡೆಯಲು ತಳಮಟ್ಟದ ಹೋರಾಟ

ನಾವು ಈ ದಾಳಿಗೆ ತಿರುಗೇಟು ನೀಡಲು ಸಿದ್ಧರಾಗಿದ್ದೇವೆ. ನಮ್ಮ ಸೋದರ, ಸೋದರಿಯರಿಗೆ ಉದ್ಯೋಗದ ಹಕ್ಕನ್ನು ನೀಡಲು ನಾನೂ ಹೋರಾಟ ಮಾಡಿದ್ದೇನೆ. ಇಂದು ನಾನು ಹೊಸ ಕರಾಳ ಕಾನೂನಿನ ವಿರುದ್ಧ ಹೋರಾಟ ಮಾಡಲು ಬದ್ಧಳಾಗಿದ್ದೇನೆ. ಕಾಂಗ್ರೆಸ್‌ನ ಎಲ್ಲಾ ನಾಯಕರು ಕೋಟ್ಯಾಂತರ ಕಾರ್ಯಕರ್ತರು ನಿಮ್ಮ ಜೊತೆಗಿದ್ದಾರೆ. ಕಾನೂನನ್ನು ಹಿಂಪಡೆ ಯಲು ತಳಮಟ್ಟದ ಹೋರಾಟ ನಡೆಸುವುದಾಗಿ ಸೋನಿಯಾ ಗಾಂಧಿ ಅವರು ತಿಳಿಸಿದ್ದಾರೆ.

## ವೈದ್ಯಾಧಿಕಾರಿ ಬದಲು: ತನಿಖೆಗೆ ಸಮಿತಿ



• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಷಿನ್ ಸೇರಿ ವಿವಿಧ ಉಪ ಕರಣಗಳ ಕಳ್ಳತನ ಆರೋಪ ಕೇಳಿ ಬಂದ ಹಿನ್ನಲೆ ಜಿಲ್ಲಾ ಆರೋಗ್ಯಾಧಿಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಡಳಿತ ವೈಫಲ್ಯ ತೋರಿದ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ|| ಜಯಲಕ್ಷ್ಮಿ ನಾಯಕ್ ಅವರನ್ನು ಆ ಸ್ಥಾನದಿಂದ ಕೆಳಗಿಳಿಸಿ, ಡಾ|| ದೇವರಾಜ ಅವರನ್ನು ನೇಮಕಗೊಳಿಸಿ, ಹಗರಣದ ಬಗ್ಗೆ ಸರ್ಕಾರದಿಂದಲೇ ತನಿಖೆ ನಡೆಸುವ ಬಗ್ಗೆ ಭರವಸೆ ನೀಡಿದರು.

ಈ ನಡುವೆ ಪ್ರಕರಣದ ಗಂಭೀರತೆಯನ್ನು ಮನಗಂಡು ಜಿಲ್ಲಾ ನೋಡಲ್ ಅಧಿಕಾರಿ ಡಾ||ಚೇತನ್ ಅವರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಸದಸ್ಯರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಆಸ್ಪತ್ರೆಯ ಸಿಬ್ಬಂದಿ ವಿಚಾರಣೆಯನ್ನೂ ಕೈಗೊಂಡಿದ್ದಾರೆ. ವಿಶೇಷವಾಗಿ ಸ್ಕ್ಯಾನಿಂಗ್ ಮಷಿನ್ ಕಳವು ಕುರಿತಂತೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.

## ವೈದ್ಯಕೀಯ ಉಪಕರಣ ಕಳವು: ಕರವೇ ಪ್ರತಿಭಟನೆ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕು ಸರ್ಕಾರಿ ಆಸ್ಪತ್ರೆ ಸ್ಕ್ಯಾನಿಂಗ್ ಮಷಿನ್ ಸೇರಿ ವಿವಿಧ ವೈದ್ಯಕೀಯ ಉಪಕರಣಗಳ ಕಳ್ಳತನ ನಡೆದಿರುವ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಶನಿವಾರ ಕರ್ನಾಟಕ ರಕ್ಷಣಾ ವೇದಿಕೆಯಿಂದ ಆಸ್ಪತ್ರೆ ಎದುರು ಪ್ರತಿಟನೆ ನಡೆಸಲಾಯಿತು.



ತಾಲ್ಲೂಕು ಕರವೇ ಅಧ್ಯಕ್ಷ ಚಂದ್ರಶೇಖರ್ ಅವರು ಮಾತನಾಡಿ, ಸರ್ಕಾರ ಬಡವರ ಆರೋಗ್ಯ ಸೇವೆ ಒದಗಿಸಲೆಂದು ಸ್ಕ್ಯಾನಿಂಗ್ ಯಂತ್ರವನ್ನು ಆಸ್ಪತ್ರೆಗೆ ನೀಡಿದೆ.ಇಲ್ಲಿನ ವೈದ್ಯರು ಶಾಮೀಲಾಗಿ ಸ್ಕ್ಯಾನಿಂಗ್ ಯಂತ್ರವನ್ನು ಇಲಾಖೆ ಸಿಬಂದ್ದಿ ಮನೆಯಲ್ಲಿ ಇಟ್ಟಿರುವುದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಹಲವಾರು ವರ್ಷಗಳಿಂದ ಸ್ಕ್ಯಾನಿಂಗ್ ಯಂತ್ರ ವನ್ನು ಉಪಯೋಗಿಸದೆ ಮೂಲೆ ಗುಂಪು ಮಾಡಿದ್ದು, ಯಂತ್ರದ ಸಹಾಯದಿಂದ ಲಿಂಗ ಭ್ರೂಣವನ್ನು ಪತ್ತೆ ಕಂಡು ಹಿಡಿಯಬಹುದೆಂದು ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆದು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕೊರೊನಾ ಸಂದರ್ಭದಲ್ಲಿ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ವೆಂಟಿಲೇಟರ್ ಮತ್ತು ಆಕ್ಸಿಜನ್ ಪೂರೈಕೆ ಮಾಡಿದ ಸಿಲಿಂಡರ್‌ಗಳು ಕಾಣೆಯಾಗಿವೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಕಳೆದ 5 ವರ್ಷದಲ್ಲಿ ಸರ್ಕಾರ ಈ ಆಸ್ಪತ್ರೆಗೆ ಯಾವ ಸೌಲಭ್ಯ ನೀಡಿದೆ, ಎಷ್ಟು ಹಣ ಬಿಡುಗಡೆ ಮಾಡಿದೆ ಎಂಬ ಬಗ್ಗೆ ತನಿಖೆ ನಡೆಸಬೇಕು ಇಲ್ಲದಿದ್ದರೆ ಕರವೇಯಿಂದ ಪತ್ರಿಭಟನೆ ಹಮ್ಮಿಕೊಳ್ಳಲಾಗುವುದೆಂದು ಎಚ್ಚರಿಸಿದರು.

ಕರವೇ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಖಾದರ್, ಮುಖಂಡರಾದ ಮೋಹನ್, ಮದನ್ ಮತ್ತಿತರರು ಹಾಜರಿದ್ದರು.

## ಅಮಿತ್ ಶಾ ವಿರುದ್ಧದ ಹೇಳಿಕೆಗೆ ಶಾಸಕ ಸಿಮೆಂಟ್ ಮಂಜು ಖಂಡನೆ

# ಸಚಿವ ಪ್ರಿಯಾಂಕ್ ಖರ್ಗೆ ಗೌರವದಿಂದ ಮಾತನಾಡಲಿ

• ಪ್ರಜೋದಯ ವರದಿ

**ಹಾಸನ:** ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಅಮಿತ್ ಶಾ ನಾಲಾಯಕ್ ಹೋಮ್ ಮಿನಿಸ್ಟರ್ ಎಂದು ಹೇಳಿರುವುದು ಖಂಡನೀಯ. ಹಿರಿಯರ ಬಗ್ಗೆ ಮಾತನಾಡುವಾಗ ಗೌರವದಿಂದ ಮಾತನಾಡಲಿ ಎಂದು ಶಾಸಕ ಸಿಮೆಂಟ್ ಮಂಜು ಅವರು ಎಚ್ಚರಿಕೆ ನೀಡಿದರು.





ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಅರ್ಧ ಶತಮಾನಗಳ ಕಾಲ ಸಕ್ರಿಯ ರಾಜಕೀಯದಲ್ಲಿದ್ದಾರೆ. ಸಾಕಷ್ಟು ಕೊಡುಗೆ ನೀಡಿದ್ದಾರೆ. ಆದರೂ ಎಂದೂ ಅವರು ಯಾರ ಬಗ್ಗೆಯೂ ಹಗುರವಾಗಿ ಮಾತನಾಡಿಲ್ಲ. ಪ್ರಿಯಾಂಕ್ ಖರ್ಗೆ ಬಾಯಿಗೆ ಬಂದಂತೆ ಮಾತನಾಡುವುದು ಸಲ್ಲದು. ಅದರಲ್ಲೂ ತಾವೂ ಸಾಂವಿಧಾನಿಕ ಹುದ್ದೆ ಪ್ರತಿನಿಧಿಯಾಗಿದ್ದು, ಅದೇ ರೀತಿಯ ಹುದ್ದೆಯಲ್ಲಿರುವವರ ಬಗ್ಗೆ ನಾಲಿಗೆಯನ್ನು ಹಿಡಿತದಲ್ಲಿ ಇಟ್ಟುಕೊಂಡು ಮಾತನಾಡಬೇಕೆಂದು ಹೇಳಿದರು.

ಅಧಿವೇಶನದ ಕೊನೆಯ ದಿನ ರಾತ್ರಿ ವಿಧಾನ ಪರಿಷತ್‌ನಲ್ಲಿ ದ್ವೇಷ ಭಾಷಣ ಮಸೂದೆ ಮೇಲೆ ಚರ್ಚೆ ನಡೆಯುತ್ತಿದ್ದ ವೇಳೆ ಪ್ರಿಯಾಂಕ್ ಖರ್ಗೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ನಾಲಾಯಕ್ ಗೃಹ ಮಂತ್ರಿ ಎಂದಿರುವುದು ಆಕ್ಷೇಪರ್ಹ. ಮಲ್ಲಿಕಾರ್ಜುನ ಖರ್ಗೆಗೆ ಅವರದೇ ಆದ ತೂಕ ಇದೆ, ಪರಿಷತ್‌ನಲ್ಲಿ ನಡೆಯುವ ಚರ್ಚೆಯನ್ನು ನಾಡಿನ ಜನತೆ ಗಮನಿಸುತ್ತಿರುತ್ತಾರೆ, ಅದರ ಅರಿವು ಪ್ರಿಯಾಂಕ್ ಖರ್ಗೆ ಅವರಿಗೂ ಇರಬೇಕು ಎಂದರು.

ದೊಡ್ಡ ವ್ಯಕ್ತಿಯ ಕುಟುಂಬದಲ್ಲಿ ಹುಟ್ಟಿದವರು ಗಂಭೀರವಾಗಿ ಮಾತನಾಡುವುದನ್ನು ಕಲಿಯಬೇಕು. ಅಮಿತ್ ಶಾ ಅವರು 2 ಬಾರಿ ಗೃಹಮಂತ್ರಿಯಾಗಿ ತಮ್ಮದೇ ಕೊಡುಗೆ ನೀಡಿದ್ದಾರೆ. ಅಂಥವರ ಬಗ್ಗೆ ಲಘುವಾಗಿ ಮಾತನಾಡುವುದನ್ನು ನಿಲ್ಲಿಸಿ, ಇದು ಹೀಗೆಯೇ ಮುಂದುವರಿದರೆ ಪ್ರತಿಭಟನೆ ಮಾಡಬೇಕಾಗುತ್ತದೆ. ನಮ್ಮದು ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ರಾಜಕೀಯವಾಗಿ ಟೀಕೆ-ಟಿಪ್ಪಣಿ ಇದ್ದೇ ಇರುತ್ತವೆ. ಆದರೆ ಹುದ್ದೆಗೆ ಗೌರವ ಕೊಡಬೇಕು, ವಯಸ್ಸು ಅರಿತು ಮಾತನಾಡಬೇಕು.ಕೇವಲವಾಗಿಮಾತನಾಡುವುದು ಸಮಂಜಸವಲ್ಲ ಎಂದು ಹೇಳಿದರು.

### ಬೆಳೆನಷ್ಟಕ್ಕೆ ನ್ಯಾಯಯುತ ಪರಿಹಾರ ನೀಡಲಿ

ಮುಂಗಾರು ಮಳೆ ನಷ್ಟದ ಬಗ್ಗೆ ನಡೆದಿರುವ ಸರ್ವೆ ಸರಿಯಾಗಿಲ್ಲ, ಇನ್ನಾದರೂ ಉತ್ತಮ ರೀತಿಯ ಸರ್ವೆ ನಡೆಸಿ ಆಗಿರುವ ಬೆಳೆನಷ್ಟಕ್ಕೆ ನ್ಯಾಯಯುತ ಪರಿಹಾರ ನೀಡಲಿ ಎಂದು ಆಗ್ರಹಿಸಿದರು. ರೈತರನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಕೆಲಸ ಮಾಡಲಿ, ಅನ್ನದಾತನ ಕಡೆಗಣಿಸಿದ ಯಾವುದೇ ಸರ್ಕಾರ ಉದ್ಧಾರ ಆಗಲ್ಲ ಎಂದು ಎಚ್ಚರಿಸಿದರು.

### ಅಧಿವೇಶನದಲ್ಲಿ ಸಮರ್ಪಕ ಉತ್ತರ ಸಿಕ್ಕಿಲ್ಲ

ಅಧಿವೇಶನದಲ್ಲಿ ನಾನು ಹಲವು ವಿಚಾರ, ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಶ್ನೆ ಎತ್ತಿದ್ದೇನೆ. ಆದರೆ, ಸರ್ಕಾರ, ಸಚಿವರ ಕಡೆಯಿಂದ ಸಮಾಧಾನಕರ ಉತ್ತರ ಸಿಕ್ಕಿಲ್ಲ, ಅಭಿವೃದ್ಧಿ ಪರವಾದ, ಅನುದಾನ ನೀಡುವ ಉತ್ತರವೂ ಸಿಗಲಿಲ್ಲ, ಮೆಕ್ಕೆಜೋಳಕ್ಕೆ ಪರಿಹಾರದ ಬೇಡಿಕೆಗೆ ಸ್ಪಂದನೆ ಸಿಗಲಿಲ್ಲ, ಬದಲಾಗಿ ಮಾತೆತ್ತಿದರೆ ಅನೇಕರು ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿದರು ಎಂದು ಸಿಮೆಂಟ್ ಮಂಜು ಅವರು ಬೇಸರ ಹೊರ ಹಾಕಿದರು.

ಇದೇ ವೇಳೆ ಸರ್ಕಾರದ ಕಾರ್ಯಕ್ರಮಕ್ಕೆ ಸ್ಥಳೀಯ ಶಾಸಕರೇ ಅಧ್ಯಕ್ಷರಾಗಬೇಕೆಂಬ ಶಿಷ್ಟಾಚಾರ ಬದಲು ಮಾಡಿರುವುದನ್ನು ಸರಿಪಡಿಸುವುದಾಗಿ ಸರ್ಕಾರದಿಂದ ಭರವಸೆ ಸಿಕ್ಕಿದೆ ಎಂದು ಮಂಜು ಹೇಳಿದರು.

### ಪ್ರಕರಣ ವಾಪಾಸ್ ಪಡೆಯುವ ಭರವಸೆ

ಸಕಲೇಶಪುರದಲ್ಲಿ ಅರ್ಜುನ ಆನೆ ವಿಚಾರದಲ್ಲಿ ಹೋರಾಟ ಮಾಡಿದವರ ಮೇಲೆ ಹಾಕಿರುವ ಪ್ರಕರಣವನ್ನು ಕ್ಯಾಬಿನೆಟ್ ಮುಂದಿಟ್ಟು ವಾಪಾಸ್ ಪಡೆಯುವುದಾಗಿ ಗೃಹ ಹಾಗು ಅರಣ್ಯ ಸಚಿವರು ಭರವಸೆ ನೀಡಿದ್ದಾರೆ. ಅರ್ಜುನನ ಸ್ಮಾರಕ ವಿಳಂಬ ಬೇಸರ ತಂದಿದೆ. ಅರಣ್ಯ ಸಚಿವರು ಶೀಘ್ರವೇ ಜಿಲ್ಲೆಗೆ ಬಂದು ಒಂದು ಅಂತ್ಯ ಕಾಣಿಸುವ ಭರವಸೆ ನೀಡಿದ್ದಾರೆ ಎಂದರು.

ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರು, ಆಲೂರು-ಕಟ್ಟಾಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಬ್ಬುನ ಕೃಷ್ಣ, ಮುಖಂಡ ರಾಜಶೇಖರ್ ಇದ್ದರು.

## ಲಂಚ ಸ್ವೀಕಾರ: ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗೆ ಸಜೆ

• ಪ್ರಜೋದಯ ವರದಿ

**ಹಾಸನ:** ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗೆ ಪ್ರಧಾನ ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯ ಜೈಲುವಾಸ ಹಾಗು ದಂಡ ವಿಧಿಸಿ ತೀರ್ಪು ಪ್ರಕಟಿಸಿದೆ. ಪಾಪೇಗೌಡ ಶಿಕ್ಷೆಗೆ ಒಳಗಾದ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ.

2011ಏ.1ರಂದುಪಾಪೇಗೌಡ ಲಂಚ ಪಡೆಯತ್ತಿದ್ದ ವೇಳೆ ಜಿಲ್ಲಾ ಲೋಕಾ ಯುಕ್ತ ಪೊಲೀಸರು ದಾಳಿ ನಡೆಸಿ, ಕಲಂ7, 13(1)(ಡಿ) ಸಹ ವಾಚನ 13(2) ಕರ್ನಾಟಕ ಭ್ರಷ್ಟಚಾರ ನಿಗ್ರಹ ಕಾಯ್ದೆಯಡಿಪ್ರಕರಣದಾಖಲಿಸಿಕೊಂಡಿದ್ದರು.

ಈ ಪ್ರಕರಣದಲ್ಲಿ ತನಿಖಾಧಿಕಾರಿ ಪೊಲೀಸ್ ನಿರೀಕ್ಷಕ ರುದ್ರಮುನಿ ಅವರು ತನಿಖೆ ಪೂರೈಸಿ, ಆರೋಪಿ ಪಾಪೇಗೌಡ ವಿರುದ್ಧ ಪ್ರಧಾನ ಜಿಲ್ಲಾ ಸತ್ರ ಮತ್ತು ವಿಶೇಷ ನ್ಯಾಯಾಲಯಕ್ಕೆ ದೋಷಾ ರೋಪಣ ಪಟ್ಟಿ ಸಲ್ಲಿಸಿದ್ದರು. ಲೋಕಾ ಯುಕ್ತ ಸಂಸ್ಥೆಯ ಪರವಾಗಿ ವಿಶೇಷ ಅಭಿ ಯೋಜಕರಾಗಿ ಪರಶು ರಾಮ್ ವಾದ ಮಂಡಿಸಿದ್ದರು. ನ್ಯಾಯಾಲಯವು ವಿಚಾರಣೆ ಕೈಗೊಂಡು ಆರೋಪ ಸಾಬೀತಾದ ಹಿನ್ನಲೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ. ಕಲಂ 7 ಪಿಸಿ ಕಾಯ್ದೆ ಅನ್ವಯ 6 ತಿಂಗಳ ಸದಾ ಶಿಕ್ಷೆ ಮತ್ತು 25 ಸಾವಿರ ರೂ. ದಂಡ ಹಾಗು 13(1) (ಡಿ) ರೆ.ವಿ. 13(2) ಆಫ್ ಪಿಸಿ ಕಾಯ್ದೆ ಅನ್ವಯ ಒಂದು ವರ್ಷ ಸಾದಾ ಶಿಕ್ಷೆ ಹಾಗು 25 ಸಾವಿರ ರೂ. ದಂಡ ವಿಧಿಸಿದೆ. ದಂಡ ಕಟ್ಟಲು ವಿಫಲವಾದಲ್ಲಿ 5 ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಿ ತೀರ್ಪನ್ನು ಹೊರಡಿಸಿದೆ.

## ಹೃದಯಸ್ತಂಭನದಿಂದ ಇಬ್ಬರು ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಹೃದಯಸ್ತಂಭನದಿಂದ ಶಿಕ್ಷಕಿ ಹಾಗು ಯುವಕ ಶನಿವಾರ ಮೃತಪಟ್ಟಿದ್ದಾರೆ.

ಅರಕಲಗೂಡು ತಾಲ್ಲೂಕಿನ ದೊಡ್ಡಳ್ಳಿ ಗ್ರಾಮದ ಸರ್ಕಾರಿ ಶಾಲೆಯ ಶಿಕ್ಷಕಿ ಸುಧಾಮಣಿ (58)ಅವರು ಮನೆಯಲ್ಲಿ ಮಲಗಿದ್ದ ವೇಳೆ ಹಠಾತ್ ಹೃದಯಾಘಾತದಿಂದ ಶನಿವಾರ ಮುಂಜಾನೆ ಮೃತಪಟ್ಟಿದ್ದಾರೆ. ಅವರು ಸೇವೆಯಿಂದ ನಿವೃತ್ತಿ ಹೊಂದಲು ಇನ್ನೆರಡು ವರ್ಷ ಮಾತ್ರ ಬಾಕಿಯಿತ್ತು. ಸುಧಾಮಣಿ ಅವರ ನಿಧನಕ್ಕೆ ವಿದ್ಯಾರ್ಥಿಗಳು, ಕುಟುಂಬಸ್ಥರು ದುಃಖ ವ್ಯಕ್ತಪಡಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿ





ಮೈಸೂರು ಹೋಬಳಿ ಗುಲ ಗಂಜಿಹಳ್ಳಿ ಗ್ರಾಮದ ಯುವಕ ಹೃದಯಾಘಾತದಿಂದ ನಿಧನಹೊಂದಿದ್ದಾನೆ. ಪರಮೇಶ್ (35) ಮೃತ. ಪಟ್ಟಣದ ಹೋಟೆಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಪರಮೇಶ್, ಮಧ್ಯರಾತ್ರಿ ಮಲಗಿದ ಲ್ಲಿಯೇ ಹಠಾತ್ ಹೃದಯಘಾತವಾಗಿ ಸಾವನ್ನಪ್ಪಿದ್ದಾರೆ. ಜಿಲ್ಲೆಯಲ್ಲಿ ಮತ್ತೆ ಹೃದಯಾಘಾತ ಪ್ರಕರಣಗಳು ಮರುಕಳಿಸಿದ್ದು ಜಿಲ್ಲೆಯ ಜನರಲ್ಲಿ ಆತಂಕ ಉಂಟು ಮಾಡಿದೆ.

## ನಿವೃತ್ತ ಸರ್ಕಾರಿ ನೌಕರರ ಬೇಡಿಕೆ ಈಡೇರಿಕೆಗೆ ಸಮಾವೇಶ





• ಪ್ರಜೋದಯ ವರದಿ

**ಹಾಸನ:** ನಿವೃತ್ತ ಸರ್ಕಾರಿ ನೌಕರರಿಗೆ ನಗದು ರಹಿತ ಆರೋಗ್ಯ ಭಾಗ್ಯ, ಸಂಧ್ಯಾ ಕಿರಣ ಯೋಜನೆ ಅನುಷ್ಠಾನಗೊಳಿಸಬೇಕೆಂದು ಒತ್ತಾಯಿಸಿ ಡಿ.23 ರಂದು ವಿಭಾಗ ಮಟ್ಟದ ಸಮಾವೇಶವನ್ನು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬೋರೇಗೌಡ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಬೇಡಿಕೆಗಳನ್ನು ಈಡೇರಿಸಿ ಕೊಳ್ಳುವ ಸಲುವಾಗಿ ರಾಜ್ಯ ನಿವೃತ್ತ ನೌಕರರ ಸಂಘದ ವತಿಯಿಂದ ಡಿ.23 ರಂದು ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮೈಸೂರು ವಿಭಾಗ ಮಟ್ಟದ ಪದಾಧಿಕಾರಿಗಳ ಮತ್ತು ನಿವೃತ್ತ ನೌಕರರ ಹಾಗು ಕುಟುಂಬ ಪಿಂಚಣಿದಾರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಸಮಾವೇಶವನ್ನು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಉದ್ಘಾಟಿಸಲಿದ್ದಾರೆ. ಸಂಘದ ರಾಜ್ಯಾಧ್ಯಕ್ಷ ಡಾ.ಎಲ್.ಬೈರಪ್ಪ ಅವರು ಪ್ರಾಸ್ತಾವಿಕ ನುಡಿ ನುಡಿಯಲಿದ್ದು, ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಸೇರಿ ಜಿಲ್ಲೆಯ ಎಲ್ಲಾ ಶಾಸಕರು ಭಾಗಹಿಸಲಿದ್ದಾರೆಂದು ತಿಳಿಸಿದರು.

ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಸ್ಥಾಪನೆಗೊಂಡು ಸುಮಾರು 65 ವರ್ಷ ಕಳೆದಿವೆ. ರಾಜ್ಯದಲ್ಲಿ ಸುಮಾರು 4.20 ಲಕ್ಷ ನಿವೃತ್ತಿ ನೌಕರರು ಮತ್ತು 1 ಲಕ್ಷ ಕುಟುಂಬ ಪಿಂಚಣಿದಾರರಿದ್ದಾರೆ. ಅವರಿಗೆ ಪ್ರಮುಖವಾಗಿ ಆರೋಗ್ಯ ಕಾಪಾಡಿಕೊಳ್ಳುವುದು ಆದ್ಯ ಕರ್ತವ್ಯ. ಆದ್ದರಿಂದ ನಗದು ರಹಿತ ಆರೋಗ್ಯ ಭಾಗ್ಯ, ಸಂಧ್ಯಾ ಕಿರಣ ಯೋಜನೆ ಅನುಷ್ಠಾನಗೊಳಿಸಬೇಕೆಂದು ಸರ್ಕಾರದ ಜೊತೆಯಲ್ಲಿ ಸಾಕಷ್ಟು ಚರ್ಚೆಯಾದರೂ ಕ್ರಮ ಕೈಗೊಂಡಿಲ್ಲವೆಂದು ದೂರಿದರು.

7ನೇ ವೇತನ ಆಯೋಗವು ತನ್ನ ವರದಿಯಲ್ಲಿ ಸರ್ಕಾರಿ ನಿವೃತ್ತಿ ನೌಕರರಿಗೆ ಹಾಗು ಕುಟುಂಬ ಪಿಂಚಣಿದಾರರಿಗೆ 70 ವರ್ಷದಿಂದ 80 ವರ್ಷದೊಳಗೆ ವಯೋಮಿತಿ ಮೀರಿದವರಿಗೆ ಶೇ.10 ರಷ್ಟು ನಿವೃತ್ತಿ ವೇತನ ಮಂಜೂರು ಮಾಡಲು ಶಿಫಾರಸ್ಸು ಮಾಡಿದೆ.ಸರ್ಕಾರ ಇದುವರೆವಿಗೂ ಅನುಷ್ಠಾನ ಗೊಳಿಸಿಲ್ಲ. ಕೂಡಲೇ ಜಾರಿಗೊಳಿಸಬೇಕೆಂದು ಒತ್ತಾಯಿಸಿದರು.

ರಾಜ್ಯ ಸರ್ಕಾರಿ ನಿವೃತ್ತ ನೌಕರರು ಹಾಗು ಕುಟುಂಬದ ಪಿಂಚಣಿದಾರರು ಮರಣ ಹೊಂದಿದ ಸಂದರ್ಭದಲ್ಲಿ ಅಂತಹ ಪ್ರಕರಣಗಳಿಗೆ ಅಂತಿಮ ವಿಧಿ ವಿಧಾನಗಳ ವೆಚ್ಚಗಳನ್ನು ನಿರ್ವಹಿಸುವುದ ಕ್ಕಾಗಿ ಈಗಾಗಲೇ ಸರ್ಕಾರಿ ನೌಕರರಿಗೆ ಸುಮಾರು ವರ್ಷಗಳಿಂದ 25 ಸಾವಿರ ನೀಡುತ್ತದೆ. ಅದೇ ಮಾದರಿಯಲ್ಲಿ 7ನೇ ವೇತನ ಆಯೋಗವು ತನ್ನ ವರದಿಯಲ್ಲಿ ನಿವೃತ್ತ ನೌಕರರು ಹಾಗು ಕುಟುಂಬ ಪಿಂಚಣಿದಾರರು ಮರಣ ಹೊಂದಿದ ಸಂದರ್ಭದಲ್ಲಿ 10 ಸಾವಿರ ನೀಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸಲಾಗುವುದೆಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ಅನಂತರಾಮು, ಪುಟ್ಟಶೆಟ್ಟಿ, ಕಾಂತರಾಜು, ಶ್ರೀನಿವಾಸ, ಎಂ.ಆರ್. ತಿಪ್ಪರಾಜು ಇದ್ದರು.

## ಟ್ರ್ಯಾಕ್ಟರ್ ಮಗುಚಿ ಬಿದ್ದು ಚಾಲಕ ಸಾವು




**ಆಲೂರು:** ಟ್ರ್ಯಾಕ್ಟರ್ ನಿಯಂತ್ರಣ ತಪ್ಪಿ ಕೆರೆ ಏರಿ ಮೇಲಿಂದ ಕೆಳಗೆ ಬಿದ್ದ ಪರಿಣಾಮ ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಿರಗಡಲು-ಹಂಪನಕುಪ್ಪೆ ಗ್ರಾಮಗಳಿಗೆ ಹೊಂದಿಕೊಂಡ ದೊಡ್ಡ ಕೆರೆ ಬಳಿ ನಡೆದಿದೆ. ಕಬ್ಬಿನಹಳ್ಳಿ ಗ್ರಾಮದ ಮಂಜೇಗೌಡ (43) ಮೃತ ರೈತ.

ಮಂಜೇಗೌಡ ಅವರು ಟ್ರ್ಯಾಕ್ಟರ್‌ನಲ್ಲಿ ಜಮೀನು ಉಳುಮೆ ಮಾಡಿ ಮನೆಗೆ ವಾಪಾಸ್ಸಾ ಗುತ್ತಿದ್ದ ವೇಳೆ ನಿಯಂತ್ರಣತಪ್ಪಿ ದೊಡ್ಡ ಕೆರೆ ಏರಿ ಮೇಲಿಂದ ಹದಿನೈದು ಅಡಿ ಆಳದ ಗದ್ದೆಗೆ ಮಗುಚಿ ಕೆಳಗೆ ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಈ ಸಂಬಂಧ ಆಲೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಮಹಾನಗರ ಪಾಲಿಕೆ ಆಸ್ತಿ ಮಾಲೀಕರಿಗೆ ಅನುಕೂಲ | ಆನ್‌ಲೈನ್‌ನಲ್ಲಿ ನೋಂದಣಿ

# ಇನ್ನುಂದೆ ಮನೆಯಲ್ಲಿ ಕುಳಿತು ಇ-ಖಾತೆ ಪಡೆಯಲು ಅವಕಾಶ





• ಪ್ರಜೋದಯ ವರದಿ

**ಹಾಸನ:** ಆಸ್ತಿ ಮಾಲೀಕರಿಗೆ ಇ-ಖಾತೆ ಪಡೆಯುವುದನ್ನು ಸರ್ಕಾರ ಸರಳೀಕರಿಸಿದ್ದು, ಇನ್ನುಂದೆ ಮನೆಯಲ್ಲಿಯೇ ಕುಳಿತು ಆನ್‌ಲೈನ್ ಮುಖಾಂತರ ಪಡೆದುಕೊಳ್ಳಬಹುದಾಗಿದೆ.

ಹಾಸನ ಮಹಾನಗರ ಪಾಲಿಕೆಯು ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ಮತ್ತು ಆಸ್ತಿ ತೆರಿಗೆ ಮೌಲ್ಯಮಾಪನ ಮತ್ತು ಪಾವತಿ ಪ್ರಕ್ರಿಯೆಯನ್ನು ಸುಗಮಗೊಳಿಸಲು ಮುಂದಾಗಿದೆ. ಆಸ್ತಿ ಮಾಲೀಕರಿಗೆ ತಮ್ಮ ಆಸ್ತಿ ದಾಖಲೆಗಳನ್ನು ಆನ್‌ಲೈನ್ ಮೂಲಕ ಪ್ರವೇಶಿಸಲು ಮತ್ತು ನಿರ್ವಹಿಸಲು ಅನುವು ಮಾಡಿಕೊಟ್ಟಿದೆ.

ಇ-ಖಾತಾ ಎಂಬುದು ಸಾಂಪ್ರದಾಯಿಕ ಖಾತಾ ಪ್ರಮಾಣಪತ್ರದ ಎಲೆಕ್ಟ್ರಾನಿಕ್ ಆವೃತ್ತಿ ಯಾಗಿದೆ. ಇದು ಆಸ್ತಿಯ ಮಾಲೀಕತ್ವ ಮತ್ತು ಪಾಲಿಕೆ ನಿಯಮಗಳ ಅನುಸರಣೆಯ ಅಧಿಕೃತ ಪುರಾವೆಯಾಗಿ ಕಾರ್ಯ ನಿರ್ವಹಿಸುತ್ತದೆ. ಆಸ್ತಿ ದಾಖಲೆಗಳನ್ನು, ವಿಶೇಷವಾಗಿ ಖಾತಾವನ್ನು ಡಿಜಿಟಲೀಕರಣಗೊಳಿಸಲು ಅಭಿವೃದ್ಧಿಪಡಿಸಲಾದ ಆನ್‌ಲೈನ್ ವ್ಯವಸ್ಥೆಯಾಗಿದೆ. ಇದು ಮಾಲೀಕತ್ವದ ಮಾಹಿತಿ, ಆಸ್ತಿಯ ಆಯಾಮಗಳು, ಸ್ಥಳ ಮತ್ತು ವಿಶಿಷ್ಟ ಗುರುತಿನ ಸಂಖ್ಯೆಗಳು ಸೇರಿ ಅಗತ್ಯ ಆಸ್ತಿ ವಿವರಗಳನ್ನು ಡಿಜಿಟಲ್ ರೂಪದಲ್ಲಿ ಕ್ರೋಢೀಕರಿಸುತ್ತದೆ. ಈ ಡಿಜಿಟಲೀ ಕರಣವು ಬಳಕೆಯನ್ನು ಸುಗಮಗೊಳಿಸುತ್ತದೆ, ಕಾಗದಪತ್ರದ ಕೆಲಸವನ್ನು ಕಡಿಮೆ ಮಾಡುತ್ತದೆ ಮತ್ತು ಆಸ್ತಿ ದಾಖಲೆಗಳ ನಿಖರತೆಯನ್ನು ಹೆಚ್ಚಿಸುತ್ತದೆ.

### ಅರ್ಹತಾ ಮಾನದಂಡಗಳೇನು

ಆಸ್ತಿಯು ನಗರ ವ್ಯಾಪ್ತಿಯಲ್ಲಿರಬೇಕು. ಕಾನೂನು ನಿರ್ಮಾಣ ಮತ್ತು ಬಳಕೆಯ ನಿಯಮ ಗಳನ್ನು ಅನುಸರಿಸುವ ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಆಸ್ತಿಗಳಿಗೆ ಅನ್ವಯಿಸುತ್ತದೆ. ಎಲ್ಲಾ ಆಸ್ತಿ ತೆರಿಗೆಗಳನ್ನು ಪುರಾವೆಯಾಗಿ ಲಭ್ಯವಿರುವ ರಶೀದಿಗಳೊಂದಿಗೆ ನವೀಕರಿಸಬೇಕು. ಆಸ್ತಿಯ ವಿನ್ಯಾಸ ಅಥವಾ ಕಟ್ಟಡ ಯೋಜನೆಯು ಪಾಲಿಕೆ ಅಥವಾ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ಸಂಬಂಧಿತ ಅಧಿಕಾರಿಗಳಿಂದ ಅನುಮೋದನೆಯನ್ನು ಹೊಂದಿರಬೇಕು. ಮಾರಾಟ ಪತ್ರಗಳು ಅಥವಾ ಕ್ರಯ ಪತ್ರಗಳು ಸೇರಿ ಮಾನ್ಯವಾದ ಮಾಲೀಕತ್ವದ ದಾಖಲೆಗಳು ಅರ್ಜಿದಾರರ ಹೆಸರಿನಲ್ಲಿರಬೇಕು. ಆಸ್ತಿಯು ಕಾನೂನು ತೊಡಕುಗಳಿಂದ ಮುಕ್ತವಾದ, ಉಪ ನೋಂದ ಣಾಧಿಕಾರಿಗಳ ಕಚೇರಿಯ ಇ.ಸಿ. ಪ್ರಮಾಣಪತ್ರದೊಂದಿಗೆ ಸ್ಪಷ್ಟ ಹಕ್ಕುಸ್ವಾಮ್ಯವನ್ನು ಹೊಂದಿರ ಬೇಕು. ಆಸ್ತಿಯು ಕಾನೂನು ವಿವಾದಗಳು ಅಥವಾ ಅತಿಕ್ರಮಣಗಳಿಂದ ಮುಕ್ತವಾಗಿರಬೇಕು.

### ಬೇಕಾಗುವ ದಾಖಲಾತಿ

- ಮಾಲೀಕರ ಭಾವಚಿತ್ರ
- ಆಸ್ತಿಯ ಕಟ್ಟಡ/ನಿವೇಶನದ ಜಿ.ಪಿ.ಎಸ್.ಛಾಯಾಚಿತ್ರ
- ಪ್ರಸ್ತುತ ಸಾಲಿನವರೆಗೆ ಪಾವತಿಸಿರುವ ಆಸ್ತಿ, ನೀರಿನ, ಯು.ಜಿ.ಡಿ, ಘನತ್ಯಾಜ್ಯ ಹಾಗು ಇತರೆ ಚಲನ್ ಪ್ರತಿಗಳು
- ವಿದ್ಯುತ್ ಆರ್.ಆರ್.ಸಂಖ್ಯೆ
- ಸ್ವತ್ತಿನ ನೋಂದಾಯಿತ ದಾಖಲಾತಿಗಳು ಇ.ಸಿ, ನಮೂನೆ-15 ಮತ್ತು 16
- ಮಾಲೀಕರ ಆಧಾರ್ ಕಾರ್ಡ್, ಪಾನ್‌ಕಾಡ್
- ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ಮಾಲೀಕರ ದೂರವಾಣಿ ಸಂಖ್ಯೆ
- ಆಸ್ತಿಯ ಭೂಪರಿವರ್ತನಾ ಆದೇಶ
- ಅನುಮೋದಿತ ಲೇಔಟ್ ನಕ್ಷೆ ಪ್ರತಿ
- ಕಟ್ಟಡ ಪರವಾನಗಿ ಪ್ರತಿ ಹಾಗು ಸ್ವತ್ತಿಗೆ ಸಂಬಂಧಿಸಿದ ಪೂರಕ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಹಾಜರುಪಡಿಸಿ ಸದರಿ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಆನ್‌ಲೈನ್‌ನಲ್ಲಿ ಇ-ಖಾತೆ ಪಡೆಯಬಹುದಾಗಿದೆ.

### ಇ-ಖಾತಾ ಪಡೆಯುವ ವಿಧಾನ

ಇ-ಖಾತಾ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು – r gi – r i e t-ಅ ವೆಬ್‌ಸೈಟ್‌ಗೆ ಭೇಟಿ ನೀಡಿ ಮತ್ತು ನಿಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಮತ್ತು ಪೋರ್ಟಲ್‌ಗೆ ಲಾಗಿನ್ ಆಗಲು ಒಟಿಪಿ ಪಡೆಯಬೇಕು. ನಂತರ ವೆಬ್‌ಸೈಟ್‌ನಲ್ಲಿ ಪಟ್ಟಿ ಮಾಡಲಾದ ನಿಮ್ಮ ವಾರ್ಡ್ ಹೆಸರು ಅಥವಾ ಸಂಖ್ಯೆಯನ್ನು ಹುಡುಕಿ, ತೆರಿಗೆ ರಶೀದಿಯಲ್ಲಿ ಉಲ್ಲೇಖಿಸಿರುವ ವಾರ್ಡ್ ಹೆಸರನ್ನು ನೀವು ಆಯ್ಕೆ ಮಾಡಿಕೊಳ್ಳಬೇಕಿದೆ. ನಂತರ ಆನ್‌ಲೈನ್ ಸೂಚನೆಗಳನ್ನು ಅನುಸರಿಸಿ ಮತ್ತು ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ ಸಲ್ಲಿಸ ಬೇಕು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ-7259585959 ಸಂಪರ್ಕಿಸಬಹುದೆಂದು ಮಹಾನಗರಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

# ಭಾವ ಲಹರಿ

## ಚಿಂತನೆಯನ್ನು ಟ್ರಿಮ್ ಮಾಡುವ ರೇಜರ್‌ಗಳು

"ನಾವು ಸನ್ನಿವೇಶವನ್ನು ನೋಡುವ ಬಗೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿಕೊಂಡರೆ- ಬದುಕು ಹೆಚ್ಚು ಹಿತಕರ ಆಗಿರುತ್ತೆ ಅಂತ ಹಿಂದಿನ ಕೆಲವು ಫಿಲಾಸಫರ್‌ಗಳು ಹೇಳಿದ್ದಾರೆ. ಮುಖದಲ್ಲಿರುವ ಗಡ್ಡವನ್ನು ರೇಜರ್‌ನಿಂದ ಹೆರೆದು ತೆಗೆದರೆ ಮುಖ ಹೊಳೆಯುತ್ತದೆ. ಅನಗತ್ಯ ಗಡ್ಡ ಮೀಸೆಗಳನ್ನು ತೆಗೆದು ಹಾಕುವುದೂ ಬದುಕಿನ ಅನಗತ್ಯ ಸಂಗತಿಗಳನ್ನು ಅಳಿಸಿ ಹಾಕುವುದೂ ಒಂದೇ ಎಂಬ ಫಿಲಾಸಫಿಯೊಂದಿಗೆ ಈ ಚಿಂತಕರು ನೀಡಿರುವ ಕೆಲವು ಸೂತ್ರಗಳನ್ನು ಫಿಲಾಸಫಿಕಲ್ ರೇಜರ್ಸ್ ಎಂದು ಕರೆದಿದ್ದಾರೆ.


ಕಾಡುದಾರಿ ಮಾಗಿಯ ಹವೆಗೆ ಆಕಾಶ ಬಿಳುಚಿಕೊಂಡಿದೆ. ಗಿಡಮರಗಳಲ್ಲಿ ಹೇಮಂತಗಾನ. ಈ ವರ್ಷ ನಮ್ಮ ಹೊದಿಕೆಗಳನ್ನೆಲ್ಲ ಹೊರಗೆ ತರಿಸಿರುವ ಚಳಿಯ ಆವುಟ ನೋಡುತ್ತ ಎದುರು ಒಂದು ಹಬೆಯಾಡುವ ಕಾಫಿ ಕಪ್ ಇಟ್ಟುಕೊಂಡರೆ ಇನ್ನೇನೂ ಬೇಕಿಲ್ಲ ಅನ್ನಿಸುತ್ತದೆ. ಡಿಸೆಂಬರ್ ಮುಗಿಯುತ್ತ ಬರುತ್ತಿದೆ, ಇನ್ನೆರಡು ವಾರದಲ್ಲಿ ದಿನದರ್ಶಿಕೆಯ ಕೊನೆಯ ಎಲೆ ಕಳಚಿ ಬೀಳಲಿದೆ.

ಗೋಡೆಗೆ ಹೊಸ ಕ್ಯಾಲೆಂಡರ್ ನೇತು ಬೀಳುವ ಹೊತ್ತಿಗೆ ಸಂದದ್ದೆಷ್ಟು ಬಂದದ್ದೆಷ್ಟು ಎಂದು ಲೆಕ್ಕ ಹಾಕುವ ಚಪಲ. ಹೊಸ ವರ್ಷದ ನಿರ್ಣಯಗಳ ಬಗ್ಗೆ ಸಿನಿಕತೆ ಬೇಕಿಲ್ಲ. ನಿರ್ಣಯಗಳಿಗಿಂತ ಅವುಗಳನ್ನು ಪಾಲಿಸುವ ಪಾಲಿಸಿ ಮುಖ್ಯ ಅಂತ ನಮಗೆ ಎಷ್ಟು ಜನ ವ್ಯಕ್ತಿತ್ವ ವಿಕಸನ ಭಾಷಣಕಾರರು ಹೇಳಿಲ್ಲ.

ನಿರ್ಣಯಗಳು ಯಾಕೆ ಮುಖ್ಯ ಅಂತಲೂ, ಅವುಗಳನ್ನು ಉಳಿಸಿಕೊಳ್ಳೋದು ಹೇಗೆ ಅಂತಲೂ ಹೇಳಿಕೊಡೋ ಟ್ಯುಟೋರಿಯಲ್‌ಗಳು ನಿಮಗೆ ದಂಡಿಯಾಗಿ ಸಿಗಬಹುದು. ನಾನೀಗ ಹೇಳಹೊರಟದ್ದು ಅದಲ್ಲ. ನಮ್ಮ ಬದುಕು ಸರಳವಾಗಿರುತ್ತದೆ. ಕೆಲವೊಮ್ಮೆ ನಾವೇ ಅದನ್ನು ಜಟಿಲ ಮಾಡಿಕೊಳ್ಳುತ್ತೇವೆ.

ನಾವು ಸನ್ನಿವೇಶವನ್ನು ನೋಡುವ ಬಗೆಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿಕೊಂಡರೆ- ಬದುಕು ಹೆಚ್ಚು ಹಿತಕರ ಆಗಿರುತ್ತೆ ಅಂತ ಹಿಂದಿನ ಕೆಲವು ಫಿಲಾಸಫರ್‌ಗಳು ಹೇಳಿದ್ದಾರೆ. ಮುಖದಲ್ಲಿರುವ ಗಡ್ಡವನ್ನು ರೇಜರ್‌ನಿಂದ ಹೆರೆದು ತೆಗೆದರೆ ಮುಖ ಹೊಳೆಯುತ್ತದೆ. ಅನಗತ್ಯ ಗಡ್ಡ ಮೀಸೆಗಳನ್ನು ತೆಗೆದು ಹಾಕುವುದೂ ಬದುಕಿನ ಅನಗತ್ಯ ಸಂಗತಿಗಳನ್ನು ಅಳಿಸಿ ಹಾಕುವುದೂ ಒಂದೇ ಎಂಬ ಫಿಲಾಸಫಿಯೊಂದಿಗೆ ಈ ಚಿಂತಕರು ನೀಡಿರುವ ಕೆಲವು ಸೂತ್ರಗಳನ್ನು ಫಿಲಾಸಫಿಕಲ್ ರೇಜರ್ಸ್ ಎಂದು ಕರೆದಿದ್ದಾರೆ. ಹೊಸ ವರ್ಷದ ಹೊಸ್ತಿಲಲ್ಲಿ, ನಮ್ಮ ಜೀವನ ಸುರಳೀತಗೊಳಿಸುವ ಅಂಥ ಕೆಲವು ರೇಜರ್‌ಗಳನ್ನು ಗಮನಿಸೋಣ.

**ಒಕ್ಕಾಮ್‌ನ ರೇಜರ್:** ನಿಮ್ಮ ಕಚೇರಿಯಲ್ಲಿ ನೀವು ನೀಡಬೇಕಾಗಿರುವ ಪ್ರೆಸೆಂಟೇಶನ್‌ಗೆ ಕೊನೆಯ ಕ್ಷಣದಲ್ಲಿ ಯಾವುದೋ ಗ್ಲಿಚ್. ಆತಂಕ ಆವರಿಸುತ್ತದೆ. ನನ್ನನ್ನು ದ್ವೇಷಿಸುವ ಯಾರೋ ಈ ಕಚೇರಿಯಲ್ಲಿದ್ದಾರೆ. ನನ್ನ ಪ್ರೆಸೆಂಟೇಶನ್‌ಗೂ ಕೆಲಸಕ್ಕೂ ಬಡ್ತಿಗೂ ಸಂಚಕಾರ ತರಲು ಯತ್ನಿಸುತ್ತಿದ್ದಾರೆ ಎಂದೆಲ್ಲ ಅಂದುಕೊಳ್ಳುತ್ತೀರಿ. ಆದರೆ ಅದನ್ನು ಸಾಬೀತುಪಡಿಸುವ ಸಾಕ್ಷ್ಯಗಳು ಯಾವುದೂ ನಿಮ್ಮಲ್ಲಿ ಇಲ್ಲ.




ಸರಳವಾದ ಸಾಧ್ಯತೆ ಏನು? ಬಹುಶಃ ನೀವೇ ಪಿಪಿಟಿ ತಯಾರಿಸಿ ಕೊನೆಯ ಕ್ಷಣದಲ್ಲಿ ಸೂಕ್ತ ಫಾರ್ಮ್ಯಾಟ್‌ಗೆ ಕೂರಿಸಲು ಮರೆತಿರಬಹುದು, ಬೇರೆ ಯಾವುದೋ ತಾಂತ್ರಿಕ ಸಮಸ್ಯೆ ಆಗಿರಬಹುದು. ಈ ರೇಜರ್ ಹೇಳುವುದು ಇಷ್ಟೇ- ಒಂದು ಘಟನೆಗೆ ಸರಳವಾದ ವಿವರಣೆಗಳು ಸರಿಯಾಗಿರುವ ಸಾಧ್ಯತೆ ಹೆಚ್ಚು. ಅನಗತ್ಯ ಅಥವಾ ಅಸಂಭವ ಊಹೆಗಳನ್ನು ತಪ್ಪಿಸಿ. ಆ ವಿವರಣೆಗೆ ಹೊಂದಿಕೊಳ್ಳಬಲ್ಲ ಸೂಕ್ತ ರುಜುವಾತು ಇದ್ದರೆ ಸಾಕು. ಪರಿಸ್ಥಿತಿಯನ್ನು ಸಂಕೀರ್ಣ ಮಾಡಿ ಇನ್ನಷ್ಟು ಸಮಸ್ಯೆ ಸೃಷ್ಟಿಸಿಕೊಳ್ಳುವ ನಮ್ಮ ಸ್ವಭಾವಕ್ಕೆ ತಡೆ ಹಾಕಲು ಈ ರೇಜರ್ ನೆರವಾಗುತ್ತದೆ. ವಿಲಿಯಂ ಒಕ್ಕಾಮ್ ಆಂಗ್ಲೋ-ಫ್ರೆಂಚ್ ಚಿಂತಕ.

**ಹ್ಯಾನ್ಲಾನ್‌ನ ರೇಜರ್:** ರಸ್ತೆಯಲ್ಲಿ ಯಾರೋ ದಿಢೀರ್ ನಿಮ್ಮ ವಾಹನಕ್ಕೆ ಅಡ್ಡ ಬಂದಿದ್ದಾರೆ. ಸಣ್ಣದೊಂದು ಡಿಕ್ಕಿ ಆಗಿ ಹೋಗಿದೆ. ಅವನ್ಯಾರೋ ದುರುದ್ದೇಶದಿಂದಲೇ ನಿಮಗೆ ಬಂದು ಕುಟ್ಟಿದ್ದಾನೆ ಎಂದುಕೊಳ್ಳುತ್ತೀರಿ. ಹಾಗಲ್ಲ, ನಿಮ್ಮ ಲೇನ್‌ಗೆ ದಿಢೀರ್ ನುಗ್ಗಿದ್ದು ಅವನ ಮೂರ್ಖತನದಿಂದಷ್ಟೇ ಇರಬಹುದು. ಇಷ್ಟೇ ಸಿಂಪಲ್ ಅದು- ಮೂರ್ಖತನದಿಂದ ಅಥವಾ ಆಕಸ್ಮಿಕವಾಗಿ ಆದುದು ಎಂದು ವಿವರಿಸಬಹುದಾದುದಕ್ಕೆ, ದುರುದ್ದೇಶ ಕಾರಣವೆಂದು ಹೇಳಬೇಡಿ. ಕಚೇರಿಯಲ್ಲಿ ನೀವು ನಡೆಸುವ ಮೀಟಿಂಗಿಗೆ ನಿಮ್ಮ ಸಹೋದ್ಯೋಗಿ ತಡವಾಗಿ ಬರುತ್ತಾರೆ. ದುರುದ್ದೇಶದಿಂದಲೇ ಹಾಗೆ ಮಾಡಿದ್ದಾರೆ ಅಂದುಕೊಳ್ಳುವುದು ತಪ್ಪು. ಅದು ನಿಜವಾಗಿಯೂ ಟ್ರಾಫಿಕ್ ಜಾಮ್‌ನಿಂದಲೇ ಆಗಿರಬಹುದು. ನಿಮ್ಮ ಬೇಸರದ ಎಫ್‌ಬಿ ಪೋಸ್ಟ್‌ಗೆ ಯಾರೋ ನಗುವ ಇಮೋಜಿ ಹಾಕಿದ್ದರೆ, ದುರುದ್ದೇಶದಿಂದಲ್ಲದೇ ಕೈತಪ್ಪಿ ಹಾಕಿರಬಹುದು. ಕಾನ್‌ಸ್ಪಿರಸಿ ಥಿಯರಿಗಳು ಹುಟ್ಟಿಕೊಳ್ಳುವುದು ಈ ನಿಯಮವನ್ನು ಮರೆತಾಗ.

**ಸಗಾನ್‌ನ ರೇಜರ್:** ನನ್ನ ಗ್ಯಾರೇಜ್‌ನಲ್ಲಿ ಬೆಂಕಿಯನ್ನು ಉಗುಳುವ ಡ್ರ್ಯಾಗನ್ ಇದೆ. ನಾನು ಅದನ್ನು ನಿಮಗೆ ತೋರಿಸಬಹುದು, ಆದರೆ ಅದು ಕಷ್ಟ. ಯಾಕೆಂದರೆ ಅದು ಅದೃಶ್ಯ ಡ್ರ್ಯಾಗನ್. ಅದು ಶಬ್ದ ಮಾಡುವುದಿಲ್ಲ, ಅದು ಶಾಖರಹಿತ, ಅದಕ್ಕೆ ಹೃದಯವೂ ಇಲ್ಲ. ಆದರೂ ನನ್ನ ಮಾತನ್ನು ನಂಬಿ ಅಂತ ಯಾರಾದರೂ ಹೇಳಿದರೆ ಖಂಡಿತ ಅವರನ್ನು ನಂಬಬೇಡಿ. ಅಮೆರಿಕದ ಕಾಸ್ಮಾಲಜಿಸ್ಟ್ ಕಾರ್ಲ್ ಸಗಾನ್‌ನ ಥಿಯರಿ ಇದು. ಅವನಿಗಿಂತ ಮೊದಲು ಡೇವಿಡ್ ಹ್ಯೂಮ್ ಎಂಬ ತತ್ವಜ್ಞಾನಿ ಇದನ್ನೇ ಹೇಳಿದ್ದ. ಇದರರ್ಥ ಇಷ್ಟೇ- ಅಸಾಮಾನ್ಯವಾದ ಸಂಗತಿಗಳನ್ನು ಸಾಬೀತು ಪಡಿಸಲು ಹೆಚ್ಚಿನ, ಅಸಾಮಾನ್ಯವಾದ ಪುರಾವೆಗಳೇ ಬೇಕು. ಮತ್ತು ನಾವು ಆ ಬಗ್ಗೆ ಹೆಚ್ಚು ಅನುಮಾನ ಹೊಂದಿರಬೇಕು. ಈ ರೇಜರ್ ಅನ್ವಯಿಸುವ ಮೂಲಕ ಎಷ್ಟೋ ಅರ್ಥಹೀನ ಚರ್ಚೆಗಳನ್ನು ಕಡಿಮೆ ಮಾಡಬಹುದು.

ಶಾಖರಹಿತ ಬೆಂಕಿಯನ್ನು ಉಗುಳುವ ಅದೃಶ್ಯ, ನಿರಾಕಾರ, ತೇಲುವ ಡ್ರ್ಯಾಗನ್‌ಗೂ ಮತ್ತು ಯಾವುದೇ ಡ್ರ್ಯಾಗನ್ ಇಲ್ಲದಿರುವಿಕೆಗೂ ವ್ಯತ್ಯಾಸವೇ ಇಲ್ಲ. ಯಾರಾದರೂ ತಾನು ದೇವರನ್ನು, ದೆವ್ವಗಳನ್ನು ನೋಡಿದ್ದೇನೆ, ಪವಾಡ ಮಾಡುತ್ತೇನೆ ಎಂದೆಲ್ಲ ಕೊಚ್ಚಿಕೊಂಡರೆ ಈ ರೂಲ್ ಅನ್ನು ಅಂಥವರ ಮೇಲೆ ಪ್ರಯೋಗಿಸಿ ಅವರ ಪೊಳ್ಳುತನ ಎಷ್ಟು ಎಂದು ಕಂಡುಕೊಳ್ಳಬಹುದು. ಹೆಚ್ಚಿನ ದೇವಮಾನವರು, ಆಸ್ತಿಕರ ವಾದಗಳು ಈ ರೂಲ್‌ನ ಮುಂದೆ ಕೊಚ್ಚಿಹೋಗುತ್ತವೆ.



**ಫೆಯ್ನ್‌ಮನ್‌ನ ರೇಜರ್:** ನೀವು ಒಂದು ಸಂಗತಿಯನ್ನು ಸರಳವಾಗಿ ವಿವರಿಸಲು ಸಾಧ್ಯವಾಗದಿದ್ದರೆ, ಅದು ನಿಮಗೆ ಅರ್ಥವಾಗಿಲ್ಲ ಎಂದೇ ಅರ್ಥ. ಸರಳ ಪದಗಳಲ್ಲಿ, ಕಡಿಮೆ ಸಂಕೀರ್ಣತೆಯಿಂದ, ಪಾರಿಭಾಷಿಕ ಗೋಜಲು ಇಲ್ಲದೆ ಏನನ್ನಾದರೂ ವಿವರಿಸಲು ಸಾಧ್ಯವಾದರೆ ಅದು ನಿಮ್ಮಲ್ಲಿ ಅಂತರ್ಗತವಾಗಿದೆ ಎಂದು ಕೊಳ್ಳಬಹುದು.

ಇದು ನಮ್ಮ ಅಥವಾ ಇತರರ ಗ್ರಹಿಕೆಗೆ ಇರುವ ಲಿಟ್ಮಸ್ ಪರೀಕ್ಷೆ. ಭೌತಶಾಸ್ತ್ರಜ್ಞ ಮತ್ತು ನೊಬೆಲ್ ಪ್ರಶಸ್ತಿ ಗೆದ್ದ ರಿಚರ್ಡ್ ಫೆಯ್ನ್‌ಮನ್ ಅವರ ಹೆಸರು ಇದಕ್ಕಿದೆ. ಸಂಕೀರ್ಣವಾದ ವೈಜ್ಞಾನಿಕ ವಿಚಾರಗಳನ್ನು ಸ್ಪಷ್ಟವಾಗಿ ವಿವರಿಸುವ ಅಸಾಧಾರಣ ಸಾಮರ್ಥ್ಯ ಅವರದಾಗಿತ್ತು. ಇದನ್ನು ನಮ್ಮ ಕನ್ನಡದ ಹಲವು ಸಾಹಿತಿಗಳಿಗೆ, ವಿಮರ್ಶಕರಿಗೆ ಅನ್ವಯಿಸಿದರೆ ಅವರು ದಾರುಣವಾಗಿ ಸೋತುಹೋಗುತ್ತಾರೆ. ತಾವೇ ಅರ್ಥಮಾಡಿಕೊಳ್ಳದ ಥಿಯರಿಗಳನ್ನು ಓದುಗರಿಗೆ ಅರ್ಥವಾಗದ ಜಟಿಲ ಭಾಷೆಯಲ್ಲಿ ವಿವರಿಸುವುದಕ್ಕೆ ಈ ಅಕಾಡೆಮಿಶಿಯನ್‌ಗಳು ಸಿದ್ಧಹಸ್ತರು.

ಅದು ಅವರ ಖಾಲಿ ತಲೆಗೆ ಸಾಕ್ಷಿಯಲ್ಲದೆ ಇನ್ನೇನಲ್ಲ. ಪ್ರಪಂಚದ ಯಾವುದೇ ನವಿರಲಿ, ಅದನ್ನು ನಾವು ಇನ್ನೊಬ್ಬರಿಗೆ ಸರಳವಾಗಿ ಸಂವಹನ ಮಾಡಲು ಸಾಧ್ಯವಾಗದಿದ್ದರೆ ಅದನ್ನು ಪಡೆದುಕೊಳ್ಳುವುದು ನಿಷ್ಪ್ರಯೋಜಕ. ಸ್ಪಷ್ಟ ಚಿಂತನೆಗೆ ಸ್ಪಷ್ಟ ಬರವಣಿಗೆಯೂ ಸಾಕ್ಷಿ. ಸರಳ ಬರಹದ ಪರವಾಗಿದ್ದ ಇನ್ನೊಬ್ಬ ಲೇಖಕ ಜಾರ್ಜ್ ಆರ್ವೆಲ್. ಆತ ಒಳ್ಳೆಯ ಬರವಣಿಗೆಯ ಆರು ನಿಯಮಗಳನ್ನು ತಿಳಿಸುತ್ತಾನೆ- ದೀರ್ಘ ವಾಕ್ಯಗಳ ಬದಲು ಸಣ್ಣ ಸರಳ ವಾಕ್ಯಗಳು, ಅಲಂಕಾರಗಳನ್ನು ಬಳಸದಿರುವುದು, ದೀರ್ಘ ಪದಗಳ ಬದಲು ಸಣ್ಣ ಪದಗಳು, ಅನಗತ್ಯ ಪದಗಳಿಗೆ ಗೇಟ್‌ಪಾಸ್, ಕರ್ಮಣಿ ಪ್ರಯೋಗಕ್ಕೆ ಕತ್ತರಿ, ಪಾರಿಭಾಷಿಕ ಪದಗಳಿಗೆ ನೋ ನೋ.

**ಹಿಚೆನ್ಸ್ ರೇಜರ್:** ಇದು ಸಗಾನ್‌ನ ರೇಜರ್‌ನ ಮುಂದುವರಿಕೆಯಂತೆ ಇದೆ. ಅಸಾಧಾರಣ ಸಂಗತಿಗಳಿಗೆ ಅಸಾಧಾರಣ ಸಾಕ್ಷ್ಯಗಳೇ ಬೇಕು ಎಂದು ಸಗಾನ್ ಹೇಳಿದರೆ, ರುಜುವಾತು ಇಲ್ಲದಿದ್ದರೆ ವಾದವೇ ಇರಕೂಡದು ಎಂದು ಕ್ರಿಸ್ಟೋ-ರ್ ಹಿಚೆನ್ಸ್ ಹೇಳುತ್ತಾನೆ. ಇವನು ನಮ್ಮ ಕಾಲದ ಅಸಾಧಾರಣ ಚಿಂತಕ, ಬರಹಗಾರ, ನಾಸ್ತಿಕ. ವಿತಂಡವಾದಗಳಿಂದ ಕೆಲವರು ನಮ್ಮನ್ನು ಗೆಲ್ಲಲು ಯತ್ನಿಸುವುದನ್ನು ನೀವು ನೋಡ ಬಹುದು.

ಅಂಥ ವಾದಗಳಿಗೆ ಮುಗುಳ್ನಗುವೇ ಉತ್ತರ ಅಷ್ಟೇ. ಹೇಳಿಕೆ ನೀಡುವವರಿಗೆ ತಮ್ಮ ಪರವಾಗಿ ರುಜುವಾತು ನೀಡಲು ಏನೂ ಇಲ್ಲದಿದ್ದರೆ, ಅಂಥ ಊಹಾಪೋಹ ನಿರಾಕರಿಸಲು ಶಕ್ತಿಯನ್ನು ಏಕೆ ವ್ಯರ್ಥ ಮಾಡುತ್ತೀರಿ? ನೀವು ಅದನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ. ಪುರಾವೆ ನೀಡುವ ಹೊಣೆಗಾರಿಕೆ, ಹೇಳಿಕೆ ಅಥವಾ ದೂರು ನೀಡುವವನದೇ ಎಂಬ ನ್ಯಾಯಶಾಸ್ತ್ರದ ಮಾತಿಗೂ ಇದನ್ನು ಜೋಡಿಸಬಹುದು. ಯಾರಾದರೂ ನಿಮ್ಮ ವಿರುದ್ಧ ಏನಾದರೂ ಆಪಾದನೆ ಮಾಡಿದರೆ, ಅದನ್ನು ಸಾಬೀತುಪಡಿಸುವ ರುಜು ವಾತನ್ನು ಅವರೇ ತೋರಿಸಬೇಕು; ಹೊರತು ನಾನು ನಿರಪರಾಧಿ ಎಂದು ತೋರಿಸಲು ನೀವು ಹೆಣಗಾಡ ಬೇಕಿಲ್ಲ.


**ಗ್ರೈಸ್‌ನ ರೇಜರ್:** ಮಗು ಮಲಗಿದೆ. ಬಾಗಿಲು ಧಡಾರಂತ ಹಾಕ್ಬೇಡ ಎಂದು ಹೆಂಡತಿ ಗಂಡನಿಗೆ ಹೇಳುತ್ತಾಳೆ. ನೀನು ಹೇಳೋಕೆ ಹೊರಟಿರೋದೇನು, ನಾನೇ ಯಾವಾಗ್ಲೂ ಮಗುವನ್ನು ಎಳಿಸ್ತೀನಿ ಅಂತಾನ? ಎಂದು ಗಂಡ ರೇಗುತ್ತಾನೆ. ಜಗಳ ಶುರುವಾಗುತ್ತದೆ. ಮಾತಿನ ತಪ್ಪು ಅರ್ಥ ಮಾಡಿಕೊಳ್ಳುವುದಕ್ಕೆ ಇದು ಪರ್ಫೆಕ್ಟ್ ಉದಾಹರಣೆ.

ಮಗು ಮಲಗಿದೆ, ಶಬ್ದ ಮಾಡಬೇಡ ಎಂದಷ್ಟೇ ಗಂಡ ಅರ್ಥಮಾಡಿಕೊಂಡರೆ ಸಾಕಿತ್ತು. ಬ್ರಿಟಿಷ್ ಫಿಲಾಸಫರ್ ಪೌಲ್ ಗ್ರೈಸ್ ಇದಕ್ಕೆ ನೀಡಿದ ವಿವರಣೆ ಕ್ಷಿಪ್ತವಾಗಿದೆ. ಸರಳವಾಗಿ ಹೇಳಬಹುದಾದರೆ- ಸಂವಹನ ನಡೆಸುವಾಗ, ಮಾತನ್ನು ಸಂದರ್ಭಪೂರ್ವಕವಾಗಿ ಅರ್ಥ ಮಾಡಿಕೊಳ್ಳಬೇಕು. ಪದಗಳನ್ನು ಸಂದರ್ಭದಿಂದ ಹೊರಗಿಟ್ಟು ಅವುಗಳ ಅಕ್ಷರಶಃ ಅರ್ಥವನ್ನು ಎತ್ತಿಕೊಳ್ಳಬಾರದು. ಸಂವಹನದಲ್ಲಿ ಸಹಕಾರ ಮತ್ತು ಸಂದರ್ಭವೇ ಮುಖ್ಯ. ಈ ಸೂತ್ರ ನಮಗೆ ತುಂಬ ಸಹಾಯಕ ಆಗಬಹುದಾದದ್ದು ಸಾಮಾಜಿಕ ಜಾಲತಾಣಗಳಲ್ಲಿ ನಾವು ನಡೆಸುವ ಚರ್ಚೆಗಳಲ್ಲಿ. ಎಷ್ಟು ಬೇಗ ನಮ್ಮ ಚರ್ಚೆಗಳು ಸಣ್ಣ ವಿಚಾರಗಳಿಂದ ಹೊರಟು ಜಗಳಗಳ ಕಡೆಗೆ ತಿರುಗುತ್ತವಲ್ಲ! ಅಂಥದನ್ನು ಅವಾಯ್ಡ್ ಮಾಡಲು ಈ ಸೂತ್ರ ಪಾಲಿಸಿ. ಹಾಗೇ ನಾವು ಆಡುವ ಮಾತುಗಳನ್ನು ರೂಪಿಸಿಕೊಳ್ಳಲೂ ಈ ನಿಯಮ ಸಹಕಾರಿ.

**ಆಲ್ಡರ್‌ನ ರೇಜರ್:** ಆಸ್ಟ್ರೇಲಿಯದ ಗಣಿತಜ್ಞ ಮೈಕ್ ಆಲ್ಡರ್‌ನ ಈ ಸೂತ್ರ ಸ್ವಲ್ಪ ಕಠಿಣವಾದದ್ದೇ. ಸಗಾನ್, ಒಕ್ಕಾಮ್ ರೇಜರ್‌ಗಳ ಇನ್ನೊಂದು ರೂಪವಾಗಿಯೂ ಇದನ್ನು ನೋಡ ಬಹುದು. ಪ್ರಯೋಗದಿಂದ ರುಜುವಾತುಪಡಿಸಲಾಗದಿದ್ದರೆ ಅಂಥ ಸಂಗತಿಗಳೇ ಸುಳ್ಳು ಎಂಬುದೇ ಇವನ ನಿರ್ಣಯ.

ವಿಜ್ಞಾನ- ಗಣಿತ ಮುಂದುವರಿಯುವುದೇ ಈ ನಿಯಮದಿಂದ. ಆದರೆ ರಾಜಕೀಯ, ಧರ್ಮದಂಥ ಕ್ಷೇತ್ರಗಳಲ್ಲಿ ಈ ರೇಜರ್ ಅನ್ನು ಯಥಾವತ್ತು ಅನುಸರಿಸುವುದು ಕಷ್ಟವೇ.

**- ಹರೀಶ್** ಕೇರ



## ಸಮರ್ಪಣಾ ಭಾವ ಇದ್ದಾಗ, ಸಿಗುವ ಭಗವಂತನ ಸಾನಿಧ್ಯ

- **ಅವಳು ಮೃದುವಾಗಿ ನಗುತ್ತಾ ಹೇಳಿದಳು, ಮಗನೇ ತಾಯಿಯನ್ನು ನೋಡಿಕೊಳ್ಳುವಾಗ ತಾಯಿಗೆ ಇನ್ನೇನು ಬೇಕು? ನನ್ನ ಗೋಪಾಲನೇ ತನ್ನ ಕೈಯಿಂದಲೇ ನನಗೆ ಆಹಾರ ಕೊಟ್ಟನು. ಕೆಲವರು ನಕ್ಕರು, ಅವಳ ಮಾತುಗಳನ್ನು ಭ್ರಮೆ ಎಂದು ಭಾವಿಸಿದರು. ಆದರೆ ಕೆಲವು ಭಕ್ತರು ಮಾತ್ರ ಭಗವಂತನು ನಿಜವಾಗಿಯೂ ತನ್ನ ಪ್ರೀತಿಯನ್ನು ಸ್ಪಷ್ಟವಾಗಿ ತೋರಿಸಿದ್ದಾನೆಂದು ಅರಿತು ಕೊಂಡರು.**

ಒಂದೊಳ್ಳೆ ಮಾತು ಬಂಗಾಳದ ಒಂದು ಸಣ್ಣ ಹಳ್ಳಿಯಲ್ಲಿ ದುರ್ಗೀಮಾ ಎನ್ನುವ ವಿಧವೆ ವಾಸಿಸುತ್ತಿದ್ದಳು. ಅವಳ ಇಷ್ಟ ದೈವವೆಂದರೆ ಪೂರ್ವಜರಿಂದ ಅವಳಿಗೆ ಬಂದಿದ್ದ ಬಾಲಕೃಷ್ಣನ ಸಣ್ಣ ಮೂರ್ತಿ. ದುರ್ಗೀಮಾ ಗೋಪಾಲನನ್ನು ಕೇವಲ ಮೂರ್ತಿಯಲ್ಲ, ತನ್ನದೇ ಮಗನಂತೆ ನೋಡುತ್ತಿದ್ದಳು. ಪ್ರತಿದಿನ ಅವನಿಗೆ ಸ್ನಾನ ಮಾಡಿಸುತ್ತಿದ್ದಳು, ಊಟ ಮಾಡಿಸುತ್ತಿದ್ದಳು, ಲಾಲಿ ಹಾಡುತ್ತಾ ಮಲಗಿಸುತ್ತಿದ್ದಳು; ಅವನು ಕುಚೋದ್ಯ ಮಾಡಿದನೆಂದು ತೋಚಿದಾಗ ಮುದ್ದಾಗಿ ಗದರಿಸುತ್ತಿದ್ದಳು.

ಹಳ್ಳಿಯವರು ನಗುನಗುತ್ತಾ, ದುರ್ಗೀಮಾ ತನ್ನ ಗೋಪಾಲನ ಪ್ರೀತಿಯಲ್ಲಿ ಸಂಪೂರ್ಣ ಹುಚ್ಚಾಗಿದ್ದಾಳೆ ಎಂದು ಹೇಳುತ್ತಿದ್ದರು. ಆದರೆ ಅವಳು ಯಾರ ಮಾತಿಗೂ ಕಿವಿಗೊಡಲಿಲ್ಲ. ಗೋಪಾಲ ಅವಳಿಗೆ ಜೀವಂತ ಮಗನೇ ಆಗಿದ್ದ. ಆದಾಯ ಅಲ್ಪವಾಗಿದ್ದರೂ, ದುರ್ಗೀಮಾ ದಿನನಿತ್ಯದ ನೈವೇದ್ಯವನ್ನು ಎಂದಿಗೂ ತಪ್ಪಿಸುತ್ತಿರಲಿಲ್ಲ.

ಗೋಪಾಲನಿಗಾಗಿ ಹಾಲು, ಅಕ್ಕಿ ಮತ್ತು ಬೆಣ್ಣೆ ತರಲು ಅವಳು ಭಿಕ್ಷೆ ಬೇಡುತ್ತಿದ್ದಳು ಅಥವಾ ಹೊಲಗಳಲ್ಲಿ ಕೆಲಸ ಮಾಡುತ್ತಿದ್ದಳು. ಗೋಪಾಲನಿಗೆ ಹಸಿವು ಆಗಬಾರದು ಎಂಬುದು ಅವಳ ಕಾಳಜಿ. ರಾತ್ರಿ ಅವಳು ಸಣ್ಣ ವೇದಿಕೆಯ ಮುಂದೆ ಕೂತು ಮೃದುವಾಗಿ ಭಜನೆ ಹಾಡುತ್ತಾ ನಿದ್ರೆಗೆ ಜಾರುತ್ತಿದ್ದಳು.

ಅವಳ ಗುಡಿಸಲು ಖಾಲಿಯಾಗಿದ್ದರೂ, ಬಟ್ಟೆಗಳು ಸರಳವಾಗಿದ್ದರೂ, ಅವಳ ಹೃದಯ ದೈವಿಕ ಮಾತೃತ್ವದ ಸಿಹಿಯಿಂದ ತುಂಬಿ ತುಳುಕುತ್ತಿತ್ತು. ಒಂದು ವರ್ಷ ಆ ಪ್ರದೇಶದಲ್ಲಿ ಭೀಕರ ಬರಗಾಲ ಬಂತು. ಬೆಳೆಗಳು ನಾಶವಾದವು, ಆಹಾರ ದುರ್ಲಭವಾಯಿತು, ಎಡೆ ಹಸಿವು ವ್ಯಾಪಿಸಿತು.

ದುರ್ಗೀಮಾಗೆ ತಿನ್ನಲು ಏನೂ ಸಿಗಲಿಲ್ಲ; ಆದರೂ ಅವಳು ಗೋಪಾಲನಿಗೆ ಕಲ್ಪಿತ ಭೋಜನ ತಯಾರಿಸುತ್ತಲೇ ಇದ್ದಳು. ಖಾಲಿ ತಟ್ಟೆಯನ್ನು ಅವನ ಮುಂದೆ ಇಟ್ಟು, ಕಣ್ಣೀರಿನಿಂದ, ಓ ನನ್ನ ಪ್ರಿಯ ಮಗನೇ, ನಿನ್ನ ತಾಯಿಯನ್ನು ಕ್ಷಮಿಸು! ಇಂದು ನಿನಗೆ ಕೊಡಲು ಏನೂ ಇಲ್ಲ ಎಂದು ಅಳುತ್ತಿದ್ದಳು. ಅವಳ ಕಣ್ಣೀರು ತಟ್ಟೆಯ ಮೇಲೆ ಬಿದ್ದು, ಪ್ರೀತಿಯ ಕೊಳವನ್ನೇ ತುಂಬಿಸಿದಂತಾಯಿತು ಆ ರಾತ್ರಿ ದುರ್ಗೀಮಾಗೆ ಬಾಗಿಲು ತಟ್ಟಿದಂತಾಯಿತು. ಬಾಗಿಲು ತೆರೆದಾಗ, ನಗುವ ಮುಖದ ಸುಂದರ ಗೋಪಾಲಕ ಬಾಲಕನು ಹಾಲಿನ ಪಾತ್ರೆ ಮತ್ತು ಆಹಾರದ ಬುಟ್ಟಿಯನ್ನು ಹಿಡಿದು ನಿಂತಿದ್ದ. ಅಮ್ಮಾ ಎಂದ ಆ ಬಾಲಕ, ರಸ್ತೆಯಲ್ಲಿ ಕೆಲವರು ಇದನ್ನು ನನಗೆ ಕೊಟ್ಟರು. ನಾನು ಸಾಕಷ್ಟು ತಿಂದಿದ್ದೇನೆ. ನೀವೇ ಇದನ್ನು ಸ್ವೀಕರಿಸಿ ಎಂದ. ದುರ್ಗೀಮಾ ಅವನನ್ನು ಆಶ್ಚರ್ಯದಿಂದ ನೋಡಿದಳು.

ಅವನ ಕಪ್ಪು ವರ್ಣ, ಸೊಗಸಾದ ಕೇಶ, ತಲೆಯ ಮೇಲೆ ಮಯೂರಪಿಚ್ಛ - ಎಲ್ಲವೂ ಅವಳಿಗೆ ಅಪರಿಚಿತವಾಗಿರಲಿಲ್ಲ. ಅವಳು ಮಾತಾಡುವಷ್ಟರಲ್ಲಿ, ಅವನು ಆಹಾರವನ್ನು ವೇದಿಕೆಯ ಮೇಲೆ ಇಟ್ಟು, ಪ್ರೀತಿಯಿಂದ ಅವಳನ್ನು ನೋಡಿ, ಅಂತರ್ಧಾನನಾದನು. ಅವಳು ನೆಲಕ್ಕೆ ಬಿದ್ದು ಅಳುತ್ತಾ, ಓ ಗೋಪಾಲಾ!

ನೀನೇ ಬಂದು ನಿನ್ನ ತಾಯಿಗೆ ಆಹಾರ ಕೊಟ್ಟೆ! ಎಂದು ಕೂಗಿದಳು. ಆ ರಾತ್ರಿಯಿಂದ ಅವಳ ಮನೆಯಲ್ಲಿ ಎಂದಿಗೂ ಆಹಾರದ ಕೊರತೆ ಕಾಣಿಸಲಿಲ್ಲ. ಅದು ಎಲ್ಲಿಂದ ಬರುತ್ತಿತ್ತು ಎಂಬುದು ಯಾರಿಗೂ ತಿಳಿದಿರಲಿಲ್ಲ. ಹೊರಗೆ ಬರಗಾಲ ಮುಂದುವರಿದರೂ, ಅವಳ ಸಣ್ಣ ಗುಡಿಸಲಿನೊಳಗೆ ಗೋಪಾಲನಿಗೆ ಹಸಿವು ಎಂದೂ ಬರಲಿಲ್ಲ.

ಬರಗಾಲ ಕೊನೆಗೊಂಡ ನಂತರ, ಹಳ್ಳಿಯವರು ದುರ್ಗೀಮಾ ಮನೆಗೆ ಬಂದರು. ಅವಳು ಹಿಂದೆಂದಿಗಿಂತ ಆರೋಗ್ಯವಂತಳಾಗಿ ಕಾಣಿಸಿಕೊಂಡಿದ್ದನ್ನು ನೋಡಿ ಅವರು ಅಚ್ಚರಿಗೊಂಡರು. ಅಮ್ಮಾ, ನೀನು ಹೇಗೆ ಬದುಕಿದಿ? ನಿನ್ನ ಬಳಿ ಏನೂ ಇರಲಿಲ್ಲವಲ್ಲ? ಎಂದು ಕೇಳಿದರು.

ಅವಳು ಮೃದುವಾಗಿ ನಗುತ್ತಾ ಹೇಳಿದಳು, ಮಗನೇ ತಾಯಿಯನ್ನು ನೋಡಿಕೊಳ್ಳುವಾಗ ತಾಯಿಗೆ ಇನ್ನೇನು ಬೇಕು? ನನ್ನ ಗೋಪಾಲನೇ ತನ್ನ ಕೈಯಿಂದಲೇ ನನಗೆ ಆಹಾರ ಕೊಟ್ಟನು. ಕೆಲವರು ನಕ್ಕರು, ಅವಳ ಮಾತುಗಳನ್ನು ಭ್ರಮೆ ಎಂದು ಭಾವಿಸಿದರು. ಆದರೆ ಕೆಲವು ಭಕ್ತರು ಮಾತ್ರ ಭಗವಂತನು ನಿಜವಾಗಿಯೂ ತನ್ನ ಪ್ರೀತಿಯನ್ನು ಸ್ಪಷ್ಟವಾಗಿ ತೋರಿಸಿದ್ದಾನೆಂದು ಅರಿತು ಕೊಂಡರು.

ಅವಳು ದೇಹತ್ಯಾಗ ಮಾಡಿದ ನಂತರವೂ, ಅವಳ ಮನೆಯ ಸುತ್ತ ದೈವಿಕ ಸಾನಿಧ್ಯವನ್ನು ಭಕ್ತರು ಇಂದಿಗೂ ಅನುಭವಿಸುತ್ತಿದ್ದಾರೆ. ಭಗವಂತನ ಸಾನಿಧ್ಯವನ್ನು ಪಡೆಯಲು ಅವನಲ್ಲಿ ಅಚಲವಾದ ನಂಬಿಕೆ ಮತ್ತು ಸಮರ್ಪಣಾ ಭಾವ ಇದ್ದರೆ ಆಯ್ತು. ಅವನಿಗೆ ನೂರಾರು ಬಗೆಯ ಭಕ್ಷ್ಯ ಭೋಜನಗಳ ನೈವೇದ್ಯ ಬೇಕಿಲ್ಲ, ಆಡಂಬರದ ಪೂಜೆಗಳು ಬೇಕಿಲ್ಲ. ಇಂಥ ಯಾವುದೇ ಆಚರಣೆಯನ್ನು ಕೂಡ ಅವನು ಕೇಳುವುದಿಲ್ಲ. ಪುಟ್ಟ ಗುಡಿಸಲಿನ ಹಣತೆ ದೀಪದಲ್ಲೂ ಭಗವಂತನ ಕೃಪೆ ಬೆಳಕು ಚೆಲ್ಲುತ್ತಿರುತ್ತದೆ.

**- ರೂಪಾ** ಗುರುರಾಜ್

## ಸಣ್ಣ ಸನ್ನೆಯಿಂದ ಉಳಿದ ಬಾಲಕನ ಪ್ರಾಣ

ವಿಮಾನಯಾನದ ಸಮಯದಲ್ಲಿ ಪ್ರಯಾಣಿಕರ ಆರೋಗ್ಯದಲ್ಲಿ ಏರುಪೇರಾಗುವುದು, ಕೆಲವೊಂದು ಅನಿರೀಕ್ಷಿತ ಘಟನೆಗಳು ಜರುಗುವುದು, ಹೈಜಾಕ್ ಮಾಡುವುದು, ವಿಮಾನದ ಗಾಲಿಗಳು ತೆರೆಯದೇ ಇರುವುದು, ಹಕ್ಕಿಗಳು ಬಂದು ಢಿಕ್ಕಿ ಹೊಡೆಯುವುದು ಇವೆಲ್ಲಾ ಕೆಲವೊಂದು ಸಮಯದಲ್ಲಿ ನಡೆಯುತ್ತಾ ಇರುತ್ತವೆ. ಇಂತಹ ಹಲವಾರು ಘಟನೆಗಳು ನೀವೂ ಓದಿರುತ್ತೀರಿ. ಇತ್ತೀಚೆಗೆ ವಿಮಾನವೊಂದರಲ್ಲಿ ಪ್ರಯಾಣ ಮಾಡುತ್ತಿದ್ದ ವಿದೇಶಿಯರೊಬ್ಬರಿಗೆ ತುರ್ತು ಆರೋಗ್ಯ ಸಮಸ್ಯೆ ಕಾಡಿದಾಗ ನಮ್ಮ ರಾಜ್ಯದ ವೈದ್ಯರೂ ಆದ ಮಾಜಿ ಶಾಸಕಿಯೊಬ್ಬರು ಪ್ರಥಮ ಚಿಕಿತ್ಸೆ ನೀಡುವ ಮೂಲಕ ಪ್ರಾಣ ರಕ್ಷಣೆ ಮಾಡಿದ್ದರು. ದಶಕಗಳ ಹಿಂದೆ ವೈದ್ಯಕೀಯ ಸಚಿವರಾಗಿದ್ದ ಡಾ ಮಲಕ ರೆಡ್ಡಿಯವರು ವಿಮಾನದಲ್ಲಿ ಪ್ರಯಾಣ ಮಾಡುವಾಗ ಪ್ರಯಾಣಿಕರೊಬ್ಬರಿಗೆ ತುರ್ತು ಆರೋಗ್ಯ ಸಹಕಾರ ನೀಡಿರುವುದು ನಿಮಗೆಲ್ಲಾ ನೆನಪಿರಬಹುದು.

ಆದರೆ ಇಲ್ಲಿರುವ ನೈಜ ಕಥೆ ಮೇಲಿನ ಯಾವುದೇ ತುರ್ತು ಘಟನೆಗಳಿಗೆ ಸಂಬಂಧ ಪಟ್ಟದ್ದಲ್ಲ. ಇದೊಂದು ಅಪರೂಪದ ಘಟನೆ. ವಿಶ್ವವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಈ ಕಥಾನಕವನ್ನು ಯಥಾವತ್ತಾಗಿ ನಿಮ್ಮ ಮುಂದೆ ಇಡುತ್ತಿರುವೆ.

ಅದು ಮ್ಯೂನಿಕ್ ನಗರದಿಂದ ಬಾರ್ಸಿಲೋನಾಕ್ಕೆ ಹೊರಟಿದ್ದ ಮುಂಜಾನೆಯ ವಿಮಾನ. ವಿಮಾನ ನಿಲ್ದಾಣದ ಜಂಜಾಟ ಮುಗಿಸಿ ಪ್ರಯಾಣಿಕರೆಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ನೆಲೆಸಿದ್ದರು. ಕೆಲವರು ನಿದ್ದೆಗೆ ಜಾರುತ್ತಿದ್ದರೆ, ಇನ್ನು ಕೆಲವರು ಕಿಟಕಿಯ ಮೂಲಕ ಹೊರಗಿನ ಮೋಡಗಳನ್ನು ನೋಡುತ್ತಾ ಮಗ್ನರಾಗಿದ್ದರು. ಎಂದಿನಂತೆ ಎಲ್ಲವೂ ಸಹಜವಾಗಿಯೇ ಇತ್ತು.

ಆದರೆ, ಆ ವಿಮಾನದಲ್ಲಿ ಅಂದು ನಡೆಯಲಿದ್ದ ಘಟನೆ ಒಬ್ಬ ಬಾಲಕನ ಬದುಕನ್ನೇ ಬದಲಿಸಲಿದೆ ಎಂದು ಯಾರಿಗೂ ತಿಳಿದಿರಲಿಲ್ಲ. ಆ ವಿಮಾನದ ಸಿಬ್ಬಂದಿ ತಂಡದಲ್ಲಿ ಇಸಾಬೆಲಾ ಮೊರೊ ಎಂಬ ಅನುಭವಿ ಫ್ಲೈಟ್ ಅಟೆಂಡೆಂಟ್ (ಗಗನಸಖಿ) ಇದ್ದರು. ಇಸಾಬೆಲಾ ಕೇವಲ ತಮ್ಮ ಕೆಲಸವನ್ನು ಯಾಂತ್ರಿಕವಾಗಿ ಮಾಡುವವರಾಗಿರಲಿಲ್ಲ.

ಬದಲಿಗೆ ಪ್ರಯಾಣಿಕರ ಅಗತ್ಯಗಳನ್ನು ಮತ್ತು ಅವರ ವರ್ತನೆಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸುವ ಸಂವೇದನಾಶೀಲ ವ್ಯಕ್ತಿಯಾಗಿದ್ದರು. ವಿಮಾನವು ಆಗಸಕ್ಕೆ ಏರಿ, ಸೀಟ್ ಬೆಲ್ಟ್ ದೀಪಗಳು ಆರಿ ಹೋದ ನಂತರ ಇಸಾಬೆಲಾ ಪ್ರಯಾಣಿಕರಿಗೆ ಊಟೋಪಚಾರ ನೀಡಲು ಸಿದ್ಧತೆ ನಡೆಸುತ್ತಿದ್ದರು. ಅವರು ಕ್ಯಾಬಿನ್‌ನಲ್ಲಿ ನಡೆದುಕೊಂಡು ಹೋಗುವಾಗ, ಮೂರನೇ ಸಾಲಿನಲ್ಲಿ ಕುಳಿತಿದ್ದ ಇಬ್ಬರು ಪ್ರಯಾಣಿಕರು ಅವರ ಗಮನ ಸೆಳೆದರು.

ಕಿಟಕಿಯ ಪಕ್ಕದಲ್ಲಿ ಸುಮಾರು ಹತ್ತು ವರ್ಷದ ಬಾಲಕನೊಬ್ಬ ಕುಳಿತಿದ್ದ. ಅವನು ನೋಡಲು ಬಡಕಲಾಗಿದ್ದ ಮತ್ತು ಅತಿಯಾದ ಆತಂಕ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವನ ಪಕ್ಕದಲ್ಲಿ ಸುಮಾರು ನಲವತ್ತರ ಆಸುಪಾಸಿನ ದೃಢಕಾಯದ ವ್ಯಕ್ತಿಯೊಬ್ಬ ಕುಳಿತಿದ್ದ. ಆ ವ್ಯಕ್ತಿಯ ಹಾವಭಾವಗಳು ತುಂಬಾ ಗಂಭೀರವಾಗಿದ್ದವು ಮತ್ತು ಆತ ಆ ಬಾಲಕನ ಪ್ರತಿಯೊಂದು ಚಲನವಲನವನ್ನೂ ಹದ್ದಿನ ಕಣ್ಣಿನಿಂದ ಕಾಯುತ್ತಿದ್ದಂತೆ ತೋರುತ್ತಿತ್ತು.

ಇಸಾಬೆಲಾ ಆ ಸಾಲನ್ನು ದಾಟಿ ಮುಂದೆ ಹೋಗುವಾಗ, ಆ ಬಾಲಕನ ಕಣ್ಣುಗಳನ್ನು ನೋಡಿದರು. ಆ ಕಣ್ಣುಗಳಲ್ಲಿ ಭಯ ಮತ್ತು ಅಸಹಾಯಕತೆ ತುಂಬಿತ್ತು. ಬಾಲಕ ಏನನ್ನೂ ಮಾತನಾಡುತ್ತಿರಲಿಲ್ಲ. ಆದರೆ ಅವನ ಕಣ್ಣುಗಳು ಮೌನವಾಗಿ ಸಹಾಯಕ್ಕಾಗಿ ಅಂಗಲಾಚುತ್ತಿದ್ದವು. ಇದ್ದಕ್ಕಿದ್ದಂತೆ, ಆ ಬಾಲಕ ತನ್ನ ಕೈಬೆರಳುಗಳಿಂದ ವಿಚಿತ್ರವಾದ ಸನ್ನೆಯೊಂದನ್ನು ಮಾಡಿದ. ಅವನು ಗಾಳಿಯಲ್ಲಿ ಏನನ್ನೋ ಬರೆಯುವಂತೆ ಅಥವಾ ನಿರ್ದಿಷ್ಟ ಆಕಾರವನ್ನು ತೋರಿಸುವಂತೆ ಬೆರಳುಗಳನ್ನು ಮಡಚುತ್ತಿದ್ದ. ಮೊದಲಿಗೆ ಇಸಾಬೆಲಾ ಇದೊಂದು ಆಟವಿರಬಹುದು ಎಂದುಕೊಂಡರು.

ಮಕ್ಕಳು ಸಾಮಾನ್ಯವಾಗಿ ಸುಮ್ಮನೆ ಕುಳಿತಾಗ ಹೀಗೆ ಮಾಡುವುದು ಸಹಜ. ಆದರೆ, ಇಸಾಬೆಲಾ ಅವರ ಅನುಭವ ಮತ್ತು ಅಂತಃಪ್ರಜ್ಞೆ ಇದು ಸಾಮಾನ್ಯವಲ್ಲ ಎಂದು ಎಚ್ಚರಿಸಿತು. ಆ ಬಾಲಕ ಆ ಸನ್ನೆಯನ್ನು ಮಾಡುತ್ತಿದ್ದಾಗ ಪಕ್ಕದ ವ್ಯಕ್ತಿ ಅವನನ್ನು ನೋಡದಂತೆ ಅತ್ಯಂತ ಎಚ್ಚರಿಕೆ ವಹಿಸುತ್ತಿದ್ದ. ಆ ದೃಶ್ಯದಲ್ಲಿ ಏನೋ ಅಸ್ವಾಭಾವಿಕತೆ ಇತ್ತು. ಆ ಸನ್ನೆಯು ತಮಾಷೆಯಾಗಿರಲಿಲ್ಲ, ಬದಲಿಗೆ ಅದು ಪ್ರಾಣಾಪಾಯದಲ್ಲಿರುವ ವ್ಯಕ್ತಿ ನೀಡುವ ಗೌಪ್ಯ ಕರೆಯಂತಿತ್ತು. ಇಸಾಬೆಲಾಗೆ ಆ ಬಾಲಕ ಮತ್ತು ಪಕ್ಕದ ವ್ಯಕ್ತಿಯ ನಡುವಿನ ಸಂಬಂಧದ ಬಗ್ಗೆ ಅನುಮಾನ ಮೂಡಿತು. ಅವರು ತಂದೆ-ಮಗನಂತೆ ಕಾಣುತ್ತಿರಲಿಲ್ಲ. ಆ ವ್ಯಕ್ತಿಯ ನಿಯಂತ್ರಣ ಮತ್ತು ಬಾಲಕನ ಭಯ ಇವೆರಡೂ ತಾಳೆಯಾಗುತ್ತಿರಲಿಲ್ಲ. ಸ್ವಲ್ಪ ಸಮಯದ ನಂತರ, ಪಕ್ಕದ ವ್ಯಕ್ತಿ ಶೌಚಾಲಯಕ್ಕೆ ಹೋಗಲು ಎದ್ದು ನಿಂತ. ಇದೇ ಸರಿಯಾದ ಸಮಯ ಎಂದು ಭಾವಿಸಿದ ಆ ಬಾಲಕ, ಇಸಾಬೆಲಾ ಕಡೆಗೆ ತಿರುಗಿ ಅದೇ ಕೈ ಸನ್ನೆಯನ್ನು ಅತ್ಯಂತ ಹತಾಶೆಯಿಂದ ಮತ್ತು ವೇಗವಾಗಿ ಮಾಡಿದ.

ಅವನ ಮುಖದಲ್ಲಿನ ಆತಂಕ ಈಗ ಸ್ಪಷ್ಟವಾಗಿತ್ತು. ಆ ಕ್ಷಣದಲ್ಲಿ ಇಸಾಬೆಲಾ ಒಂದು ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಬೇಕಾಯಿತು. ಒಂದು ವೇಳೆ ತಮ್ಮ ಅನುಮಾನ ತಪ್ಪಾಗಿದ್ದರೆ? ಪ್ರಯಾಣಿಕರೊಬ್ಬರ ಮೇಲೆ ವಿನಾಕಾರಣ ಆರೋಪ ಮಾಡಿದಂತಾಗುತ್ತದೆ. ಆದರೆ, ಒಂದು ವೇಳೆ ತ'ವ್'ು



ಅ ನ್ ಂ ವ್ ಾ ನ್ ನಿಜವಾಗಿದ್ದು, ಈಗ ಸುಮ್ಮನಿದ್ದರೆ ಆ ಮಗುವಿನ ಪ್ರಾಣಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ.

ಇಸಾಬೆಲಾ ತಮ್ಮ ಮನಸಾಕ್ಷಿಯ ಮಾತನ್ನು ಕೇಳಿದರು. ಅವರು ತಕ್ಷಣವೇ ಯಾವುದೇ ಗದ್ದಲವಿಲ್ಲದಂತೆ ಕಾಕ್‌ಪಿಟ್‌ಗೆ ತೆರಳಿದರು. ಕ್ಯಾಪ್ಟನ್ ಬಳಿ ಹೋದ ಇಸಾಬೆಲಾ, ಅತ್ಯಂತ ತುರ್ತು ಮತ್ತು ಗೌಪ್ಯ ಸಂದೇಶವನ್ನು ರವಾನಿಸಿದರು - 3-ಎ ಸೀಟ್‌ನಲ್ಲಿರುವ ಪ್ರಯಾಣಿಕರ ಬಗ್ಗೆ ಬಲವಾದ ಅನುಮಾನವಿದೆ. ಇದು ಸಂಭಾವ್ಯ ಅಪಹರಣ ಅಥವಾ ಮಾನವ ಕಳ್ಳಸಾಗಣೆಯ ಪ್ರಕರಣವಾಗಿರಬಹುದು. ತಕ್ಷಣವೇ ಲ್ಯಾಂಡಿಂಗ್ ಮತ್ತು ನೆಲದ ಮೇಲೆ ಪೊಲೀಸ್ ಭದ್ರತೆಯನ್ನು ಕೋರುತ್ತಿದ್ದೇನೆ ಮುಂದೇನಾಯಿತು?

ವಿಮಾನದ ಕ್ಯಾಪ್ಟನ್ ಕೂಡ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡ. ಪ್ರಯಾಣಿಕರಿಗೆ ನಿಜವಾದ ವಿಷಯ ತಿಳಿದರೆ ಆತಂಕ ಸೃಷ್ಟಿಯಾಗಬಹುದು ಮತ್ತು ಆ ಅಪಹರಣಕಾರ ವಿಮಾನದಲ್ಲಿ ಏನಾದರೂ ಅನಾಹುತ ಮಾಡಬಹುದು ಎಂಬ ಭಯವಿತ್ತು. ಆದ್ದರಿಂದ, ಪೈಲಟ್ ಜಾಣತನದಿಂದ ಒಂದು ಘೋಷಣೆ ಮಾಡಿದ- ವಿಮಾನದಲ್ಲಿ ಸಣ್ಣ ತಾಂತ್ರಿಕ ದೋಷ ಕಂಡು ಬಂದಿರುವುದರಿಂದ ನಾವು ಹತ್ತಿರದ ಜಿನೀವಾ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡುತ್ತಿದ್ದೇವೆ.

ಈ ಘೋಷಣೆ ಕೇಳಿ ಆ ಬಾಲಕನ ಪಕ್ಕದಲ್ಲಿದ್ದ ವ್ಯಕ್ತಿ ಸಿಟ್ಟಿಗೆದ್ದ. ಆತ ವಿಚಲಿತನಾಗಿದ್ದ. ಆದರೆ ಅಷ್ಟರಲ್ಲಾಗಲೇ ವಿಮಾನವು ಜಿನೀವಾದ ಕಡೆಗೆ ತಿರುಗಿತ್ತು. ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ, ಪ್ರಯಾಣಿಕರಿಗೆ ಏನಾಗುತ್ತಿದೆ ಎಂದು ತಿಳಿಯುವ ಮುನ್ನವೇ, ಸಾದಾ ಉಡುಪಿನಲ್ಲಿದ್ದ ವಿಶೇಷ ಭದ್ರತಾ ಸಿಬ್ಬಂದಿ ವಿಮಾನದೊಳಗೆ ಪ್ರವೇಶಿಸಿದರು. ಆ ವ್ಯಕ್ತಿ ಪ್ರತಿರೋಧ ತೋರಲು ಪ್ರಯತ್ನಿಸಿದನಾದರೂ, ಪೊಲೀಸರು ಕ್ಷಣಮಾತ್ರದಲ್ಲಿ ಅವನನ್ನು ಸುತ್ತುವರಿದರು. ಪರಿಶೀಲನೆ ನಡೆಸಿದಾಗ ಅವನ ಬಳಿ ಇದ್ದ ದಾಖಲೆಗಳು ಮತ್ತು ಪಾಸ್‌ಪೋರ್ಟ್ ನಕಲಿ ಎಂದು ತಿಳಿದುಬಂತು. ಅವನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇಕಾಗಿದ್ದ ಒಬ್ಬ ಕುಖ್ಯಾತ ಮಾನವ ಕಳ್ಳಸಾಗಣೆಗಾರನಾಗಿದ್ದ. ಪೊಲೀಸರು ಆ ಬಾಲಕನನ್ನು ಪ್ರತ್ಯೇಕವಾಗಿ ವಿಚಾರಿಸಿದಾಗ, ಅವನು ಕಣ್ಣೀರು ಹಾಕುತ್ತಾ ನಡುಗುವ ದನಿಯಲ್ಲಿ ಸತ್ಯವನ್ನು ಬಾಯಿಬಿಟ್ಟ.

ಅವನನ್ನು ಕೆಲವು ವಾರಗಳ ಹಿಂದೆಯೇ ಅಪಹರಿಸಲಾಗಿತ್ತು. ಅವನ ಪೋಷಕರು ಅವನನ್ನು ಹುಡುಕುತ್ತಿದ್ದರು ಮತ್ತು ಇಂಟರ್‌ಪೋಲ್ ಕೂಡ ಈ ಬಾಲಕನಿಗಾಗಿ ಬಲೆ ಬೀಸಿತ್ತು. ಆ ವ್ಯಕ್ತಿ ಬಾಲಕನನ್ನು ಬೇರೊಂದು ದೇಶಕ್ಕೆ ಸಾಗಿಸಲು ಕರೆದೊಯ್ಯುತ್ತಿದ್ದ. ಬಾಲಕನಿಗೆ ತಾನು ಮಾಡುವ ಆ ಕೈಸನ್ನೆ ಯಾರಾದರೂ ಅರ್ಥಮಾಡಿಕೊಳ್ಳುತ್ತಾರೆ ಎಂಬ ಸಣ್ಣ ಆಸೆಯಷ್ಟೇ ಉಳಿದಿತ್ತು.

ಅಂದು ಇಸಾಬೆಲಾ ಅವರ ಆ ಒಂದು ಸೂಕ್ಷ್ಮದೃಷ್ಟಿ, ಆ ಬಾಲಕನ ಪಾಲಿಗೆ ದೇವರ ದೃಷ್ಟಿಯಾಗಿ ಪರಿಣಮಿಸಿತ್ತು. ಆ ಕ್ಷಣದಲ್ಲಿ ಇಸಾಬೆಲಾ ಅವರಿಗೆ ಅರ್ಥವಾಯಿತು; ತಾನು ಕೇವಲ ಊಟ ಬಡಿಸುವ ಸಿಬ್ಬಂದಿಯಲ್ಲ, ಬದಲಿಗೆ ಒಂದು ಜೀವವನ್ನು ಉಳಿಸಿದ ರಕ್ಷಕಿ ಎಂದು. ಪೊಲೀಸರು ಆ ಬಾಲಕನನ್ನು ಕರೆದೊಯ್ಯುವಾಗ, ಅವನು ಬಾಗಿಲ ಬಳಿ ನಿಂತು ಹಿಂದೆ ತಿರುಗಿ ನೋಡಿದನು. ಕಣ್ಣೀರಿನ ನಡುವೆಯೂ ಅವನ ಮುಖದಲ್ಲಿ ಮುಗ್ಧ ನಗು ಮೂಡಿತ್ತು. ಅವನು ಇಸಾಬೆಲಾ ಅವರ ಕಡೆಗೆ ಕೈಬೀಸಿ, ಮೌನವಾಗಿ ವಿದಾಯ ಹೇಳಿದನು. ಈ ಘಟನೆ ನಡೆದು ಕೆಲವು ದಿನಗಳು ಕಳೆದಿದ್ದವು. ಇಸಾಬೆಲಾ ಎಂದಿನಂತೆ ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಆಗ ಅವರಿಗೆ ಇಂಟರ್‌ಪೋಲ್‌ನಿಂದ ಒಂದು ಪತ್ರ ಬಂತು. ಆ ಲಕೋಟೆಯನ್ನು ತೆರೆದಾಗ ಅದರಲ್ಲಿ ಬಾಲಕ ಬರೆದ ಒಂದು ಚಿತ್ರವಿತ್ತು.

ಆ ಚಿತ್ರದಲ್ಲಿ ಮೋಡಗಳ ನಡುವೆ ಹಾರುತ್ತಿರುವ ಒಂದು ವಿಮಾನವಿತ್ತು. ವಿಮಾನದ ಪಕ್ಕದಲ್ಲಿ ನಗುತ್ತಿರುವ ಒಬ್ಬ ಫ್ಲೈಟ್ ಅಟೆಂಡೆಂಟ್ ಚಿತ್ರವಿತ್ತು. ಚಿತ್ರದ ಕೆಳಭಾಗದಲ್ಲಿ, ಬಾಲಕನ ಕೈಬರಹದಲ್ಲಿ ಸರಳವಾದ ಆದರೆ ಅತ್ಯಂತ ಆಳವಾದ ಅರ್ಥವುಳ್ಳ ಒಂದು ಸಾಲಿತ್ತು- ಅಂದು ನನ್ನನ್ನು ನೋಡಿದ್ದಕ್ಕೆ ಧನ್ಯವಾದಗಳು. ಈ ಸಾಲು ಇಸಾಬೆಲಾ ಅವರ ಕಣ್ಣಲ್ಲಿ ನೀರು ತರಿಸಿತು.

ಜಗತ್ತಿನ ಎಷ್ಟೋ ಜನ ಕೇವಲ ನೋಡುತ್ತಾರೆ, ಆದರೆ ಗಮನಿಸುವುದಿಲ್ಲ. ಆದರೆ ಇಸಾಬೆಲಾ ಅಂದು ಕೇವಲ ನೋಡಲಿಲ್ಲ, ಆ ಬಾಲಕನ ಮೂಕವೇದನೆಯನ್ನು ಗಮನಿಸಿದರು. ಈ ಸತ್ಯ ಘಟನೆಯು ನಮಗೆ ಒಂದು ದೊಡ್ಡ ಪಾಠವನ್ನು ಕಲಿಸುತ್ತದೆ. ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ಎಷ್ಟೋ ಬಾರಿ ಜನರು, ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರು ಸಂಕಷ್ಟದಲ್ಲಿದ್ದಾಗ ಬಾಯಿಬಿಟ್ಟು ಸಹಾಯ ಕೇಳಲಾಗದ ಪರಿಸ್ಥಿತಿಯಲ್ಲಿರುತ್ತಾರೆ.

ಅಂಥ ಸಮಯದಲ್ಲಿ ಅವರು ನೀಡುವ ಸಣ್ಣ ಸುಳಿವುಗಳು, ಕಣ್ಣಿನ ಭಾಷೆ ಅಥವಾ ಕೈಸನ್ನೆಗಳು ಅವರ ಪ್ರಾಣ ಉಳಿಸಲು ಇರುವ ಏಕೈಕ ದಾರಿಯಾಗಿರುತ್ತವೆ. ನಾವು ನಮ್ಮ ಮೊಬೈಲ್ ಫೋನ್‌ಗಳಲ್ಲಿ ಅಥವಾ ನಮ್ಮದೇ ಪ್ರಪಂಚದಲ್ಲಿ ಮುಳುಗಿ ಹೋಗುವ ಬದಲು, ನಮ್ಮ ಸುತ್ತಮುತ್ತ ಏನಾಗುತ್ತಿದೆ ಎಂಬುದರ ಬಗ್ಗೆ ಸ್ವಲ್ಪ ಜಾಗರೂಕತೆ ವಹಿಸಿದರೆ, ನಾವು ಕೂಡ ಯಾರದೋ ಪಾಲಿನ ರಕ್ಷಕರಾಗಬಹುದು. ಇಸಾಬೆಲಾ ಮೊರೊ ಅವರ ಸಮಯಪ್ರಜ್ಞೆ ಮತ್ತು ಮಾನವೀಯತೆಯು ವಿಮಾನಯಾನ ಜಗತ್ತಿನಲ್ಲಿ ಒಂದು ಮಾದರಿಯಾಗಿ ಉಳಿಯಿತು. ಕೆಲವೊಮ್ಮೆ, ಒಂದು ಅದೃಶ್ಯವೆನಿಸುವ ಸನ್ನೆ, ಇಡೀ ಜೀವವನ್ನೇ ಉಳಿಸಬಲ್ಲದು ಎಂಬುದಕ್ಕೆ ಈ ಕಥೆಯೇ ಸಾಕ್ಷಿ.

### ಏನೋ ಅಸ್ವಾಭಾವಿಕತೆ

- ಆ ದೃಶ್ಯದಲ್ಲಿ ಏನೋ ಅಸ್ವಾಭಾವಿಕತೆ ಇತ್ತು.
- ಆ ಸನ್ನೆಯು ತಮಾಷೆಯಾಗಿರಲಿಲ್ಲ, ಬದಲಿಗೆ ಅದು ಪ್ರಾಣಾಪಾಯದಲ್ಲಿರುವ ವ್ಯಕ್ತಿ ನೀಡುವ ಗೌಪ್ಯ ಕರೆಯಂತಿತ್ತು.
- ಇಸಾಬೆಲಾಗೆ ಆ ಬಾಲಕ ಮತ್ತು ಪಕ್ಕದ ವ್ಯಕ್ತಿಯ ನಡುವಿನ ಸಂಬಂಧದ ಬಗ್ಗೆ ಅನುಮಾನ ಮೂಡಿತು.
- ಅವರು ತಂದೆ-ಮಗನಂತೆ ಕಾಣುತ್ತಿರಲಿಲ್ಲ.
- ಆ ವ್ಯಕ್ತಿಯ ನಿಯಂತ್ರಣ ಮತ್ತು ಬಾಲಕನ ಭಯ ಇವೆರಡೂ ತಾಳೆಯಾಗುತ್ತಿರಲಿಲ್ಲ.
- ಸ್ವಲ್ಪ ಸಮಯದ ನಂತರ, ಪಕ್ಕದ ವ್ಯಕ್ತಿ ಶೌಚಾಲಯಕ್ಕೆ ಹೋಗಲು ಎದ್ದು ನಿಂತ.
- ಇದೇ ಸರಿಯಾದ ಸಮಯ ಎಂದು ಭಾವಿಸಿದ ಆ ಬಾಲಕ, ಇಸಾಬೆಲಾ ಕಡೆಗೆ ತಿರುಗಿ ಅದೇ ಕೈ ಸನ್ನೆಯನ್ನು ಅತ್ಯಂತ ಹತಾಶೆಯಿಂದ ಮತ್ತು ವೇಗವಾಗಿ ಮಾಡಿದ.
- ಅವನ ಮುಖದಲ್ಲಿನ ಆತಂಕ ಈಗ ಸ್ಪಷ್ಟವಾಗಿತ್ತು.
- ಆ ಕ್ಷಣದಲ್ಲಿ ಇಸಾಬೆಲಾ ಒಂದು ಕಠಿಣ ನಿರ್ಧಾರವನ್ನು ತೆಗೆದುಕೊಳ್ಳಬೇಕಾಯಿತು.
- ಒಂದು ವೇಳೆ ತಮ್ಮ ಅನುಮಾನ ತಪ್ಪಾಗಿದ್ದರೆ?
- ಪ್ರಯಾಣಿಕರೊಬ್ಬರ ಮೇಲೆ ವಿನಾಕಾರಣ ಆರೋಪ ಮಾಡಿದಂತಾಗುತ್ತದೆ.
- ಆದರೆ, ಒಂದು ವೇಳೆ ತಮ್ಮ ಅನುಮಾನ ನಿಜವಾಗಿದ್ದು, ಈಗ ಸುಮ್ಮನಿದ್ದರೆ ಆ ಮಗುವಿನ ಪ್ರಾಣಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ.




### ದ್ವೇಷವನ್ನು ಕಟ್ಟಿಕೊಳ್ಳಬೇಡಿ ನಾಯಕರೆ

ಹಂಚಿಕೊಳ್ಳುವ ಒಲುಮೆಯನು
ಕಿತ್ತುಕೊಳ್ಳಬೇಡಿ ನಾಯಕರೆ
ದ್ವೇಷ ಹೊಡೆದಾಟ ನಡೆವುದ
ಒಪ್ಪಿಕೊಳ್ಳಬೇಡಿ ನಾಯಕರೆ
ಜನಸಾಮಾನ್ಯರಿಂದು ನಿಮ್ಮನ್ನೇ
ನಂಬಿಹರು ತಿಳಿಯದಾದಿರೇ
ಸ್ವಾರ್ಥ ವಂಚನೆಗಳ ನೀವೆಂದೂ
ತಬ್ಬಿಕೊಳ್ಳಬೇಡಿ ನಾಯಕರೆ
ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ನಿಮಗೆ
ವಂಚಿಸದವರು ನಾವುಗಳು
ಕಷ್ಟವಿಲ್ಲದೆಯೇ ಬದುಕಿರುವಾಗ
ಬಾಚಿಕೊಳ್ಳಬೇಡಿ ನಾಯಕರೆ
ಈ ನೆಲದಿ ವಾಸಿಸುವ ಜನರ
ತಾಳ್ಮೆಗೂ ಒಂದು ಮಿತಿಯಿದೆ ಈಶ
ಜಾತಿ ಜಾತಿಯ ನಡುವೆ
ದ್ವೇಷವನ್ನು ಕಟ್ಟಿಕೊಳ್ಳಬೇಡಿ
ನಾಯಕರೆ

**- ಹಾ.ಮ ಸತೀಶ** ಬೆಂಗಳೂರು

